೫ನೇ ಕರಡು

# ಕರ್ನಾಟಕ ಸರ್ಕಾರ

*ಕರಡು*

# ಕರ್ನಾಟಕ ಉಚಿತ ಮತ್ತು ಕಡ್ಡಾಯ ಶಿಕ್ಷಣ ನಿಯಮ 2010

ಜೂನ್, 2010

*ಕರಡು ರೂಪಿಸಿದವರು :*

ಕರ್ನಾಟಕ ನಿವೃತ್ತ ಶಿಕ್ಷಣಾಧಿಕಾರಿಗಳ ಸಂಘ, ಬೆಂಗಳೂರು

## ಕರ್ನಾಟಕ ನಿವೃತ್ತ ಶಿಕ್ಷಣಾಧಿಕಾರಿಗಳ ಸಂಘ, ಬೆಂಗಳೂರು

### ಕರ್ನಾಟಕ ಉಚಿತ ಮತ್ತು ಕಡ್ಡಾಯ ಶಿಕ್ಷಣ ನಿಯಮ 2010

### ಕರಡು ರಚನಾ ಸಮಿತಿ

**1.** ಡಿ. ಜಗನ್ನಾಥರಾವ್, ನಿವೃತ್ತ ನಿರ್ದೇಶಕರು — ಅಧ್ಯಕ್ಷರು

**2.** ಜಿ. ಚಂದ್ರಶೇಖರ್, ನಿವೃತ್ತ ನಿರ್ದೇಶಕರು

**3.** ಅಬ್ದುಲ್ ವಾಜೀದ್, ನಿವೃತ್ತ ನಿರ್ದೇಶಕರು

**4.** ಮುನಿಶಾಮಪ್ಪ, ನಿವೃತ್ತ ಸಹ ನಿರ್ದೇಶಕರು

**5.** ಕೆ. ಜೋಸೆಫ್, ನಿವೃತ್ತ ಸಹ ನಿರ್ದೇಶಕರು

**6.** ರಾಜಾರಾಂ, ನಿವೃತ್ತ ಸಹ ನಿರ್ದೇಶಕರು

**7.** ವೆಂಕಟರಾಮ್, ನಿವೃತ್ತ ಸಹ ನಿರ್ದೇಶಕರು

**8.** ಡಿ. ಶಂಕರ್, ನಿವೃತ್ತ ಉಪ ನಿರ್ದೇಶಕರು

**9.** ಸಿ.ವಿ. ತಿರುಮಲ ರಾವ್, ನಿವೃತ್ತ ಸಹ ನಿರ್ದೇಶಕರು — ಸದಸ್ಯ ಕಾರ್ಯದರ್ಶಿಗಳು

***Note:***

*The committee interacted with a number of persons working in the field of elementary education – teachers, NGOs, advocates, education experts and retired officers – and obtained their views over a month and has prepared these draft rules. It has also taken the draft Model Rules circulated by MHRD in to consideration. Finally the suggestions received in two interaction meetings with SPD and other departmental officers were incorporated in revised drafts.*

## ಕರ್ನಾಟಕ ರಾಜ್ಯ ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣ ಹಕ್ಕು ಶಿಕ್ಷಣ ನಿಯಮಗಳು, 2010

**ಭಾಗ – 1 : ಪೂರ್ವಭಾವಿ**

**ಸಂಕ್ಷಿಪ್ತ ಶೀರ್ಷಿಕೆ, ವ್ಯಾಪ್ತಿ ಮತ್ತು ಪ್ರಾರಂಭ**

1. (ಅ) ಈ ನಿಯಮವನ್ನು ಕರ್ನಾಟಕದ ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣದ ಹಕ್ಕು ನಿಯಮಗಳು 2010 ಎಂದು ಕರೆಯತಕ್ಕದ್ದು.
   (ಆ) ಇವು ಈ ಕೂಡಲೇ ಜಾರಿಗೆ ಬರಲಿವೆ.
   (ಇ) ಇವು ಇಡೀ ಕರ್ನಾಟಕ ರಾಜ್ಯ ವ್ಯಾಪ್ತಿಗೆ ಅನ್ವಯವಾಗತಕ್ಕದ್ದು,

**ಪರಿಭಾಷೆಗಳು** :

2. (1) ಈ ನಿಯಮದಲ್ಲಿ ಸನ್ನಿವೇಶವು ಅನ್ಯಥಾ ಸ್ಪಷ್ಟ ಪಡಿಸಿದ ಹೊರತು ;

(ಅ) "ಅಧಿನಿಯಮ' ಎಂದರೆ ಕಡ್ಡಾಯ ಮತ್ತು ಉಚಿತ ಶಿಕ್ಷಣ ಕಾಯಿದೆ ಮಗುವಿನ ಹಕ್ಕು, 2009.

(ಆ) 'ಮಗು' ಎಂದರೆ 6 ರಿಂದ 14 ವಯೋಮಿತಿಯಲ್ಲಿರುವ ಯಾವುದೇ ಮಗು.

(ಇ) ಈ ನಿಯಮದಲ್ಲಿ 'ನೆರೆಹೊರೆ ಶಾಲೆ' ಎಂದರೆ ಮಗುವು ನಡೆದುಹೋಗಬಹುದಾದ ದೂರದಲ್ಲಿರುವ ಯಾವುದೇ ಅಂಗೀಕೃತ ಶಾಲೆ – 1 ರಿಂದ 5ನೇ ತರಗತಿಯವರೆಗಿನ ಪ್ರಾಥಮಿಕ ಹಂತದಲ್ಲಿ 1 ಕಿ.ಮೀ.ಅಂತರದಲ್ಲಿ, 6 ರಿಂದ 8ನೇ ತರಗತಿಯನ್ನೊಳಗೊಂಡಂತೆ ಹಿರಿಯ ಪ್ರಾಥಮಿಕ ಹಂತದಲ್ಲಿ 3 ಕಿ.ಮೀ. ಅಂತರದಲ್ಲಿ.

(ಈ) 'ಕ್ಷೇತ್ರ ಶಿಕ್ಷಣಾಧಿಕಾರಿಗಳು' ಎಂದರೆ ಸಂಬಂಧಿಸಿದ ಶೈಕ್ಷಣಿಕ ಬ್ಲಾಕ್‌ನ (ತಾಲ್ಲೂಕು) ಕ್ಷೇತ್ರ ಶಿಕ್ಷಣಾಧಿಕಾರಿಗಳು.

(ಉ) 'ಉಪನಿರ್ದೇಶಕರು' ಎಂದರೆ ಸಂಬಂಧಿಸಿದ ಶೈಕ್ಷಣಿಕ ಜಿಲ್ಲೆಯ ಉಪನಿರ್ದೇಶಕರು ಹಾಗೂ ಇವರು ಈ ನಿಯಮವನ್ನು ಜಾರಿಗೊಳಿಸುವ ಪ್ರಾಧಿಕಾರವಾಗಿರುತ್ತಾರೆ.

(ಊ)'ಶಾಲಾ ಉಸ್ತುವಾರಿ ಸಮಿತಿ' ಎಂದರೆ ಈಗಾಗಲೇ ರಾಜ್ಯದಲ್ಲಿ ಅಸ್ತಿತ್ವದಲ್ಲಿರುವ ಶಾಲಾಭಿವೃದ್ಧಿ ಹಾಗೂ ಮೇಲುಸ್ತುವಾರಿ ಸಂಸ್ಥೆ (S.D.M.C). ಎಂದು ಜನಪ್ರಿಯವಾಗಿರುವ ಸಂಸ್ಥೆಯೇ ಈ ನಿಯಮದಡಿಯಲ್ಲಿ ರೂಪಿಸಿರುವ ಎಲ್ಲಾ ಕರ್ತವ್ಯಗಳನ್ನು ನಿರ್ವಹಿಸುತ್ತದೆ.

(ಋ) ನಿಯಮಗಳಡಿಯಲ್ಲಿರುವ ಪಠ್ಯ ಪ್ರಾಧಿಕಾರ, ಅಂದರೆ ಡಿ.ಎಸ್.ಇ.ಆರ್.ಟಿ. ಎಂದು ಗುರುತಾಗಿರುವ ರಾಜ್ಯ ಶೈಕ್ಷಣಿಕ ಸಂಶೋಧನೆ ಹಾಗೂ ತರಬೇತಿ ಸಂಸ್ಥೆ.

(ಎ) 'ಡಯಟ್' ಎಂದರೆ ಜಿಲ್ಲಾ ಹಂತದಲ್ಲಿನ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ – ಇದು ಜಿಲ್ಲಾ ಹಂತದಲ್ಲಿನ ಪಠ್ಯ ಸಂಬಂಧಿ ಚಟುವಟಿಕೆಗಳನ್ನು ಅನುಷ್ಠಾನಗೊಳಿಸುತ್ತದೆ.

(ಏ) 'ಬಿ.ಆರ್.ಸಿ.' ಎಂದರೆ ಸಂಬಂಧಿಸಿದ ಬ್ಲಾಕ್‌ನ ಕ್ಷೇತ್ರ ಸಂಪನ್ಮೂಲ ಕೇಂದ್ರ.

(ಐ) 'ಸಿ.ಆರ್.ಸಿ.' ಎಂದರೆ ಸಂಬಂಧಿಸಿದ ಶಾಲಾ ಸಮೂಹದ ಗುಚ್ಛ ಸಂಪನ್ಮೂಲ ಕೇಂದ್ರ.

(ಒ) ನಿಯಮದ ಉದ್ದೇಶಕ್ಕೆ ಸಂಬಂಧಿಸಿದಂತೆ ಸ್ಥಳೀಯ ಪ್ರಾಧಿಕಾರವು ಗ್ರಾಮಪಂಚಾಯಿತಿ, ಎಸ್.ಡಿ.ಎಂ.ಸಿ. ಬಿ.ಇ.ಓ.ಗಳೂ ವಿವಿಧ ಹಂತದಲ್ಲಿ ಕಾರ್ಯನಿರ್ವಹಿಸುತ್ತಿದ್ದರೂ ಸ್ಥಳೀಯ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಬರುತ್ತಾರೆ.

(ಓ) ಕೆ.ಎಸ್.ಕ್ಯೂ.ಎ.ಓ. ಎಂದರೆ ಕರ್ನಾಟಕ ರಾಜ್ಯ ಗುಣಮಟ್ಟ ಮೌಲ್ಯಾಂಕನ ಸಂಸ್ಥೆ.

(ಔ) ಎನ್.ಸಿ.ಟಿ.ಇ. ಎಂದರೆ ಶಿಕ್ಷಕರ ಶಿಕ್ಷಣದ ರಾಷ್ಟ್ರೀಯ ಕೌನ್ಸಿಲ್.

(ಅಂ) ಸಿ.ಇ.ಓ. ಎಂದರೆ ಸಂಬಂಧಿಸಿದ ಜಿಲ್ಲೆಯ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ

(ಅ:) ಈ ನಿಯಮದಡಿಯಲ್ಲಿ ಅಂಗೀಕೃತ ಶಾಲೆ ಎಂದರೆ – ವಿಶೇಷ ಶಾಲೆಗಳನ್ನು ಬಿಟ್ಟು ರಾಜ್ಯ ಸರ್ಕಾರ ಅಥವಾ ಸ್ಥಳೀಯ ಪ್ರಾಧಿಕಾರದಡಿಯಲ್ಲಿ ಕಾರ್ಯ ನಿರ್ವಹಿಸುವಂತಹ ಸಂಪೂರ್ಣ ಖರ್ಚು ಅಥವಾ ಭಾಗಶ: ಖರ್ಚು ವೆಚ್ಚಗಳನ್ನು ಭರಿಸುವಲ್ಲಿ ಸರ್ಕಾರದಿಂದ ಅನುದಾನ ಪಡೆಯುವಂತಹ ಶಾಲೆ ಅಥವಾ ಅನುದಾನರಹಿತ ಶಾಲೆಗಳು.

(ಕ) ವಿಶೇಷ ಶಾಲೆಗಳೆಂದರೆ ಕೇಂದ್ರೀಯ ವಿದ್ಯಾಲಯ, ನವೋದಯ ಶಾಲೆ, ಸೈನಿಕ ಶಾಲೆ, ಮೊರಾರ್ಜಿ ದೇಸಾಯಿ ಶಾಲೆ, ಕೆ.ಜಿ.ಬಿ.ವಿ. ಶಾಲೆ, ಮಾದರಿ ಶಾಲೆ ಅಥವಾ ಯಾವುದೇ ಇತರೇ ಶಾಲೆ ತನ್ನದೇ ಆದಂತಹ ವಿಶೇಷ ಗುಣಮಟ್ಟ ಹೊಂದಿದ್ದು ರಾಜ್ಯ ಸರ್ಕಾರದಿಂದ ಕಾಲ ಕಾಲಿಕವಾಗಿ ಗುರುತಿಸಲ್ಪಟ್ಟಂತಹ ಶಾಲೆಗಳು.

(2) ನಿಯಮಗಳಡಿಯಲ್ಲಿ ನಮೂದಿಸಿರುವ ಇತರೆ ಪದಗಳು ಹಾಗೂ ವಿವರಣೆಗಳು ಸಂಬಂಧಿಸಿದ ನಿಯಮದಲ್ಲಿ ತಿಳಿಸಿದಂತಹ ಅರ್ಥವನ್ನೇ ಒಳಗೊಂಡಿರುತ್ತವೆ.

## ಭಾಗ – 2 : ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣ ಹಕ್ಕು.

3 (ಎ) ಈ ನಿಯಮದಂತೆ 6 ರಿಂದ 14 ವರ್ಷದೊಳಗಿರುವ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣವು ಹಕ್ಕಾಗಿರುತ್ತದೆ. ಇದು ಮುಂದುವರೆದು ರಾಜ್ಯ ಸರ್ಕಾರ ಅಥವಾ ಸ್ಥಳೀಯ ಪ್ರಾಧಿಕಾರಕ್ಕೆ ಸಂಬಂಧಿಸಿದಂತೆ ;

(1) 6 ರಿಂದ 14 ವರ್ಷದ ವಯೋಮಿತಿಯಲ್ಲಿರುವ ಎಲ್ಲಾ ಮಕ್ಕಳು 1 ರಿಂದ 8ನೇ ತರಗತಿಯವರೆಗಿನ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು 'ನೆರೆಹೊರೆಯ ಅಂಗೀಕೃತ ಶಾಲೆಗಳಲ್ಲಿ' ಪಡೆಯುತ್ತಿರುವುದನ್ನು ಖಚಿತ ಪಡಿಸಿಕೊಳ್ಳಬೇಕು.

(2) ಮೇಲೆ ತಿಳಿಸಿದ ವಯೋಮಾನದಲ್ಲಿರುವ ಎಲ್ಲಾ ಮಕ್ಕಳ ಕಡ್ಡಾಯ ದಾಖಲಾತಿ, ಹಾಜರಾತಿ ಮತ್ತು 1 ರಿಂದ 8ನೇ ತರಗತಿ ಪೂರ್ಣಗೊಳಿಸುವುದನ್ನು ಖಚಿತ ಪಡಿಸಿಕೊಳ್ಳುವುದು.

(3) ಪ್ರತಿ ಪ್ರಾಥಮಿಕ ಹಂತದ ನೆರೆಹೊರೆ ಶಾಲೆಯಲ್ಲಿ ಅಗತ್ಯವಿರುವಷ್ಟು ಶಾಲಾ ಕಟ್ಟಡ, ಗಂಡು ಮತ್ತು ಹೆಣ್ಣು ಮಕ್ಕಳಿಗೆ ಪ್ರತ್ಯೇಕ ಶೌಚಾಲಯ, ಪೀಠೋಪಕರಣ, ಶಿಕ್ಷಕರು ಮತ್ತು ಕಲಿಕಾ–ಭೋಧನೋಪಕರಣಗಳು ಇರುವುದನ್ನು ಖಚಿತಪಡಿಸಿಕೊಳ್ಳುವುದು.

(4) ಸಾಮಾನ್ಯ ವರ್ಗದ ಎಲ್ಲಾ ಮಕ್ಕಳು, ಬಡತನದ ರೇಖೆಯ ಕೆಳಗಿರುವ ಮಕ್ಕಳು ಹಾಗೂ ಇತರೆ ಸೌಲಭ್ಯವಂಚಿತ ಮಕ್ಕಳು ಹಾಗೂ ಇತರೆ ಸಾಮಾನ್ಯವಾಗಿ ಎಲ್ಲಾ ಮಕ್ಕಳು ಕಡ್ಡಾಯ ಮತ್ತು ಉಚಿತ ಶಿಕ್ಷಣ ವ್ಯಾಪ್ತಿಯಲ್ಲಿ ಇರುವುದನ್ನು ಖಚಿತಪಡಿಸಿಕೊಳ್ಳುವುದು.

(5) ಸೂಚಿಸಿದ ನಿಯಮ ಮತ್ತು ಮಟ್ಟದಂತೆ ಗುಣಮಟ್ಟ ಶಿಕ್ಷಣ ನೀಡುವುದನ್ನು ಖಚಿತ ಪಡಿಸಿಕೊಳ್ಳುವುದು.

(6) ಪ್ರತಿ ವರ್ಷವೂ ಸಮಯಕ್ಕೆ ಸರಿಯಾಗಿ ಪಠ್ಯವಸ್ತುವಿನ ರಚನೆ, ಪಠ್ಯಪುಸ್ತಕ ಹಾಗೂ ಕಲಿಕಾ ವಸ್ತುಗಳು ಮಕ್ಕಳಿಗೆ ತಲುಪುವಂತೆ ಖಚಿತಪಡಿಸಿಕೊಳ್ಳುವುದು.

(7) ಶಿಕ್ಷಕರ ಹುದ್ದೆಯು ಖಾಲಿಯಾದ 90 ದಿನಗಳೊಳಗಾಗಿ ಶಿಕ್ಷಕರ ಹುದ್ದೆಯನ್ನು ಭರ್ತಿ ಮಾಡುವುದು ಹಾಗೂ ಅಗತ್ಯ ಸಂಖ್ಯೆಯಷ್ಟು ಶಿಕ್ಷಕರು ಇರುವುದನ್ನು ಖಚಿತ ಪಡಿಸಿಕೊಳ್ಳುವುದು.

(ಬಿ) ಶಾಲಾ ಮಟ್ಟದಲ್ಲಿ ಸದರಿ ನಿಯಮಗಳನ್ನು ಅಳವಡಿಸುವ ಕರ್ತವ್ಯವು ಸ್ಥಳೀಯ ಸಂಸ್ಥೆಯಾದ ಎಸ್.ಡಿ.ಎಂ.ಸಿ.ಯದಾಗಿರುತ್ತದೆ. ಎಸ್.ಡಿ.ಎಂ.ಸಿ.ಯು ತಮ್ಮ ವ್ಯಾಪ್ತಿಯಲ್ಲಿನ ಪ್ರತಿ ಮಗುವು ಶಾಲೆಗೆ ದಾಖಲಾಗುವುದನ್ನು, ನಿರಂತರವಾಗಿ ಹಾಜರಾಗುವುದನ್ನು ಹಾಗೂ ಗುಣಮಟ್ಟದ ಶಿಕ್ಷಣ ಪಡೆಯುವುದನ್ನು ಖಚಿತಪಡಿಸಿಕೊಳ್ಳುವುದು. ಇದಲ್ಲದೇ ನಿರ್ದಿಷ್ಟ ವ್ಯಾಪ್ತಿಯಲ್ಲಿ ಯಾವುದೇ ಮಗುವು ಶಾಲೆ ತೊರೆಯುವುದನ್ನು ತಡೆಯುವ ಮತ್ತು ಶಾಲೆಯಿಂದ ಹೊರಗುಳಿಯುವುದನ್ನು ತಡೆಯುವ ಕೆಲಸವನ್ನೂ ಮಾಡಬೇಕಿರುತ್ತದೆ. ಸದರಿ ನಿಯಮದ ಅನುಷ್ಠಾನದಲ್ಲಿ ಲೋಪವಾದಾಗಲೆಲ್ಲಾ ಶಾಲೆಯ ಮುಖ್ಯ ಶಿಕ್ಷಕರು ಲೋಪದ ವಿವರಗಳನ್ನು ಎಸ್.ಡಿ.ಎಂ.ಸಿ.ಯ ಗಮನಕ್ಕೆ ತರುವುದು.

(ಸಿ)ಮೊದಲ ಪಂಚಾಯತ್ ರಾಜ್ಯ ಸಂಸ್ಥೆಯಾದ ಗ್ರಾಮ ಪಂಚಾಯತ್ ಸಂಸ್ಥೆಯು ತಮ್ಮ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಶಾಲೆಗಳು ಸರಿಯಾಗಿ ಕರ್ತವ್ಯ ನಿರ್ವಹಿಸುವುದನ್ನು ಹಾಗೂ ಸದರಿ ನಿಯಮಗಳನ್ನು ಸರಿಯಾಗಿ ಅನುಷ್ಠಾನಗೊಳಿಸುವುದನ್ನು ಖಚಿತ ಪಡಿಸಿಕೊಳ್ಳಬೇಕು.

(ಡಿ) ಡಯಟ್ / ಡಿ.ಎಸ್.ಇ.ಆರ್.ಟಿ.ಯಿಂದ ತಯಾರಿಸಿದ / ಅನುಮೋದಿಸಿದ ಪಠ್ಯವಿಷಯಗಳನ್ನು ಉಪಯೋಗಿಸಿಕೊಂಡು ಶಾಲೆ ತೊರೆದ ಹಾಗೂ ಶಾಲೆ ಬಿಟ್ಟ ಮಕ್ಕಳಿಗೆ ಅವರಿಗೆ ವಯಸ್ಸಿಗನುಗುಣವಾದ ಸೇತುಬಂಧ ನಡೆಸಿ ತರಬೇತಿಯನ್ನು ನೀಡಬೇಕು ಹಾಗೂ ಮಕ್ಕಳ ಪ್ರಗತಿಯನ್ನು ಕಾಲಕಾಲಿಕವಾಗಿ ಮೌಲ್ಯಮಾಪನ ಮಾಡಬೇಕು. ಇದರ ನಂತರ ಮಗುವನ್ನು ಅದರ ವಯಸ್ಸಿಗನುಗುಣವಾದ ತರಗತಿಗೆ ದಾಖಲಿಸಿದ ನಂತರ, ಶಾಲೆಯು ಆ ಮಕ್ಕಳ ಕಡೆ ನಿರಂತರ ಗಮನಹರಿಸಿ, ಮಕ್ಕಳು ಇತರೆ ಮಕ್ಕಳೊಡನೆ ಯಶಸ್ವಿಯಾಗಿ ಅಭ್ಯಾಸ ಮಾಡುವಂತೆ ಮಾಡಬೇಕು.

**ಭಾಗ – ೩ 'ಎ' : ಸರ್ಕಾರ ಮತ್ತು ಸ್ಥಳೀಯ ಪ್ರಾಧಿಕಾರದ ಕರ್ತವ್ಯಗಳು:**

4(1) ಜಾತಿ, ತರಗತಿ, ಧರ್ಮ, ಲಿಂಗ ಆಧಾರದ ಮೇಲೆ ಮಕ್ಕಳ ಮಧ್ಯೆ ಯಾವುದೇ ರೀತಿಯ ತಾರತಮ್ಯ ಆಗದಂತೆ ನೋಡಿಕೊಳ್ಳುವುದು ಸ್ಥಳೀಯ ಪ್ರಾಧಿಕಾರದ ಕರ್ತವ್ಯವಾಗಿರುತ್ತದೆ.

(2)ಪ್ರತಿ ವರ್ಷವೂ ಮೇ, 25ರೊಳಗೆ ನೈಸರ್ಗಿಕ ತೊಂದರೆಗಳು, ಜನಸಂಖ್ಯೆಯ ಒತ್ತಡ, ದೂರದ ಗ್ರಾಮಾಂತರ ಪ್ರದೇಶಗಳ ಬೆರಳೆಣಿಕೆಯ ಜನಸಂಖ್ಯೆ ಇವುಗಳನ್ನು ಆಧರಿಸಿ, ಪ್ರತಿ ಶೈಕ್ಷಣಿಕ ಬ್ಲಾಕ್‌ನ ಕ್ಷೇತ್ರ ಶಿಕ್ಷಣಾಧಿಕಾರಿಗಳು 'ನೆರೆಹೊರೆ' ಶಾಲೆಯನ್ನು ಗುರ್ತಿಸಬೇಕು.

(3) ಉಪ ನಿಯಮ 3(ಅ) (1) ರಲ್ಲಿ ಸೂಚಿಸಿರುವ ನಿಯಮಗಳನ್ನು ಪಾಲಿಸಲು ಅಗತ್ಯವಿರುವೆಡೆಯಲ್ಲಿ ರಾಜ್ಯ ಸರ್ಕಾರವು ಹೊಸ ಶಾಲೆಯನ್ನು ಪ್ರಾರಂಭಿಸಬಹುದು ಅಥವಾ ಪ್ರಸ್ತುತ ಇರುವ ಶಾಲೆಯನ್ನು ಹಿರಿಯ ಪ್ರಾಥಮಿಕ ಶಾಲೆಯಾಗಿ ಉನ್ನತೀಕರಿಸಬಹುದು.

(4) ಈ ಉದ್ದೇಶಕ್ಕಾಗಿ ಸ್ಥಳೀಯ ಪ್ರಾಧಿಕಾರ ಅಥವಾ ಕ್ಷೇತ್ರ ಶಿಕ್ಷಣಾಧಿಕಾರಿಗಳು ಪ್ರತಿ ವರ್ಷ ಜೂನ್ ತಿಂಗಳೊಳಗೆ ಶಾಲಾ ನಕ್ಷೆಯನ್ನು ತಯಾರಿಸಿ, ಸಮೀಕ್ಷೆಯ ಮೂಲಕ ಅರ್ಹತೆ ಇರುವ ಮಕ್ಕಳನ್ನು ಗುರ್ತಿಸಿ, ಎಲ್ಲಾ ಮಕ್ಕಳು ನೆರೆಹೊರೆಯ ಅಂಗೀಕೃತ ಶಾಲೆಯಲ್ಲಿ ದಾಖಲಾಗುವುದನ್ನು ಖಚಿತ ಪಡಿಸಿಕೊಳ್ಳುವುದು.

(5) ಕಠಿಣ ಸ್ಥಳಗಳಲ್ಲಿ ಅಥವಾ ನೈಸರ್ಗಿಕ ಅಡೆತಡೆಗಳಿರುವಡೆಯಲ್ಲಿ ಶಾಲೆಯನ್ನು ಸ್ಥಾಪಿಸಿದಲ್ಲಿ / ಉನ್ನತೀಕರಿಸಿದಲ್ಲಿ (ಅಗತ್ಯವಿರುವೆಡೆಯಲ್ಲಿ ಉಪ ನಿಮಯ 2(ಪಿ)ಯನ್ನು

ಹೊರತುಪಡಿಸಿ) ಅಲ್ಲಿನ ಎಲ್ಲಾ ಮಕ್ಕಳು ತೊಂದರೆಯಿಲ್ಲದಂತೆ 8 ವರ್ಷಗಳ ಶಿಕ್ಷಣವನ್ನು ಮುಗಿಸುವುದನ್ನು ಖಚಿತ ಪಡಿಸಿಕೊಳ್ಳಬೇಕು.

(6) ಶಾಲೆಯನ್ನು ಪ್ರಾರಂಭಿಸಲು / ಉನ್ನತೀಕರಿಸಲು ಸಾಧ್ಯವಿಲ್ಲದ ಕಡಿಮೆ ಜನರಿರುವ ಜನವಸತಿ ಪ್ರದೇಶಗಳಲ್ಲಿನ ಮಕ್ಕಳಿಗೆ ಸಾರಿಗೆ ವ್ಯವಸ್ಥೆಯನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳು (ಸ್ಥಳೀಯ ಪ್ರಾಧಿಕಾರವು) ಮಾಡಿ, ಮಕ್ಕಳು ಶಿಕ್ಷಣ ಪಡೆಯುವುದನ್ನು ಖಚಿತ ಪಡಿಸಿಕೊಳ್ಳುವುದು.

(7) ನಗರ ಪ್ರದೇಶಗಳಲ್ಲಿ ಅಥವಾ ಹೆಚ್ಚಿನ ಜನಸಂಖ್ಯೆಯಿರುವ ಜನವಸತಿಗಳು ಇರುವೆಡೆಯಲ್ಲಿ 6–14 ವಯೋಮಿತಿಯಲ್ಲಿರುವ ಮಕ್ಕಳ ಸಂಖ್ಯೆಯನ್ನು ಆಧರಿಸಿ ಕ್ಷೇತ್ರ ಶಿಕ್ಷಣಾಧಿಕಾರಿಗಳು ಒಂದಕ್ಕಿಂತ ಹೆಚ್ಚು ನೆರೆಹೊರೆ ಶಾಲೆಯನ್ನು ಗುರ್ತಿಸಬಹುದು. ಈ ರೀತಿ ಗುರ್ತಿಸಿದ ಶಾಲೆಗಳ ಬಗ್ಗೆ ತಿಳುವಳಿಕೆಯನ್ನು ಸಾರ್ವಜನಿಕರಿಗೆ ನೀಡುವುದು ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕರ್ತವ್ಯವಾಗಿರುತ್ತದೆ.

(8) ವಿಶೇಷ ಅಗತ್ಯವುಳ್ಳ ಮಕ್ಕಳಿದ್ದು, ನೆರೆಹೊರೆ ಶಾಲೆಗೆ ಬರಲು ಕಷ್ಟವಾಗಿರುವ ಸಂದರ್ಭದಲ್ಲಿ ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳು / ಸ್ಥಳೀಯ ಪ್ರಾಧಿಕಾರಿಗಳು / ಎಸ್.ಡಿ.ಎಂ.ಸಿ.ಯು ಆ ಮಕ್ಕಳಿಗೆ ಸೂಕ್ತ ಹಾಗೂ ಪರ್ಯಾಯ ಅಗತ್ಯ ಸೌಲಭ್ಯಗಳನ್ನು ಒದಗಿಸಿ ಅವರು ಶಿಕ್ಷಣ ಪಡೆಯುವುದನ್ನು ಖಚಿತ ಪಡಿಸಿಕೊಳ್ಳಬೇಕು.

(9) ಸರ್ಕಾರದಿಂದ ಕಾಲ ಕಾಲಕ್ಕೆ ಕೊಡುವ ಸೌಲಭ್ಯಗಳಾದ ವಿದ್ಯಾರ್ಥಿ ವೇತನ, ಉಚಿತ ಸಮವಸ್ತ್ರ, ಉಚಿತ ಪಠ್ಯಪುಸ್ತಕ, ಉಚಿತ ಮಧ್ಯಾಹ್ನದ ಉಪಹಾರ, ಉಚಿತ ಶಾಲಾ ಬ್ಯಾಗ್, ಬರೆಯುವ ಸಾಮಗ್ರಿಗಳು ಮತ್ತು ಇತರೆ ಸೌಲಭ್ಯಗಳು ಶಾಲೆಗೆ ಬರುವ ಎಲ್ಲಾ ಮಕ್ಕಳಿಗೂ ತಲುಪುವಂತೆ ನೋಡಿಕೊಳ್ಳಬೇಕು ಹಾಗೂ 25% ಪಾಲು ಅಡಿಯಲ್ಲಿ ಖಾಸಗಿ ಅನುದಾನರಹಿತ ಶಾಲೆಯಲ್ಲಿ ದಾಖಲಾಗುವ ಮಕ್ಕಳಿಗೂ ಈ ಸೌಲಭ್ಯ ದೊರೆಯುವಂತೆ ಮಾಡಬೇಕು.

(10) ಈ ನಿಯಮಗಳಡಿಯಲ್ಲಿ ಸಂಬಂಧಿಸಿದ ಬ್ಲಾಕ್‌ಗಳಲ್ಲಿ ಮಕ್ಕಳು ದಾಖಲಾತಿಗಾಗಿ ಕಾಲಯುಕ್ತ ಚಟುವಟಿಕೆಯ ಪಟ್ಟಿಯನ್ನು ('ಕ್ಯಾಲೆಂಡರ್ ಆಫ್ ಇವೆಂಟ್'ನ್ನು) ಕ್ಷೇತ್ರ ಶಿಕ್ಷಣಾಧಿಕಾರಿಗಳು ತಯಾರಿಸಿಬೇಕು. ಮಕ್ಕಳನ್ನು ದಾಖಲು ಮಾಡುವಾಗ ಕ್ಯಾಲೆಂಡರ್ ಆಫ್ ಇವೆಂಟ್ ಪ್ರಕಾರ ನಡೆಯದೇ, ನಿಯಮವನ್ನು ಮುರಿದಲ್ಲಿ ಅಂತಹ ಶಾಲೆಗಳನ್ನು ಕಪ್ಪು ಪಟ್ಟಿಯಲ್ಲಿಟ್ಟು ಈ ನಿಯಮದ ಪ್ರಕಾರ ದಂಡ ವಿಧಿಸುವುದು.

(11) 6 ರಿಂದ 14 ವಯೋಮಾನದ ಎಲ್ಲಾ ಮಕ್ಕಳು ನೆರೆಹೊರೆ ಶಾಲೆಗೆ ದಾಖಲಾಗುವಂತೆ ಮಾಡಲು ರಾಜ್ಯ ಸರ್ಕಾರ ಅಥವಾ ಸ್ಥಳೀಯ ಪ್ರಾಧಿಕಾರವು ಇನ್ನಿತರ ಯಾವುದೇ ವ್ಯವಸ್ಥೆಯನ್ನು ರೂಪಿಸಬಹುದಾಗಿದೆ. ಈ ನಿಯಮಗಳಡಿ ನೆರೆಹೊರೆಯಡಿಯಲ್ಲಿ ಬರುವ ಎಲ್ಲಾ ಶಾಲೆಗಳನ್ನು (ಸರ್ಕಾರಿ, ಅನುದಾನಿತ ಮತ್ತು ಅನುದಾನ ರಹಿತ) ಗುಂಪು ಮಾಡಿ, ಎಲ್ಲಾ ಶಾಲೆಗಳಲ್ಲಿ ಒಂದೇ ರೂಪದ ದಾಖಲಾತಿ ನಿಯಮಗಳಿರುವಂತೆ ನೋಡಿಕೊಳ್ಳಬೇಕು. ಯಾವುದೇ ಒಂದು ಶಾಲೆಗೆ ಅಗತ್ಯಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿ ದಾಖಲಾತಿ ಬೇಡಿಕೆ ಬಂದಲ್ಲಿ ರಾಜ್ಯ ಸರ್ಕಾರವು ಲಾಟರಿ ವ್ಯವಸ್ಥೆಯನ್ನು ಅಳವಡಿಸಿಕೊಳ್ಳಬಹುದು.

(12) ಮಗುವಿನ ತಂದೆ ಅಥವಾ ಪೋಷಕರು ವರ್ಗಾವಣೆ ಪತ್ರವನ್ನು (ಟಿ.ಸಿ.) ಬಯಸಿದಲ್ಲಿ ಅದನ್ನು ನೀಡುವುದನ್ನು ನಿರಾಕರಿಸುವಂತಿಲ್ಲ. ಪ್ರಸ್ತುತ ಶೈಕ್ಷಣಿಕ ಸಾಲಿನ ಮಧ್ಯಂತರ ಅವಧಿಯಲ್ಲಿ ಮಗುವು ಶಾಲೆಯನ್ನು ಬಿಡಲು ವರ್ಗಾವಣೆ ಪತ್ರ ಬಯಸಿದಲ್ಲಿ, ಅದಕ್ಕೆ ಯಾವುದೇ ರೀತಿಯ ಶುಲ್ಕವನ್ನು ವಿಧಿಸುವಂತಿಲ್ಲ.

(13) ಸರ್ಕಾರದಿಂದ ಅಥವಾ ಇನ್ನಾವುದೇ ಏಜೆನ್ಸಿಯಿಂದ ನಡೆಯುತ್ತಿರುವ ಪೂರ್ವ ಪ್ರಾಥಮಿಕ ಕೇಂದ್ರಗಳು ಪ್ರಸ್ತುತವಿರುವ ಪ್ರಾಥಮಿಕ ಶಾಲೆಗೆ ಹೊಂದಿಕೊಂಡಿರುವುದನ್ನು ರಾಜ್ಯ ಸರ್ಕಾರವು ಖಚಿತ ಪಡಿಸಿಕೊಳ್ಳಬೇಕು. ಅಂಗನವಾಡಿ ಇಲ್ಲದಿದ್ದ ಕಡೆ ಹಿರಿಯ ಮಕ್ಕಳು ಮನೆಯ ತಮ್ಮ ತಂಗಿಯರ ಪಾಲನೆಗಾಗಿ ಶಾಲೆಗೆ ಹಾಜರಾಗದೇ ಇರುವುದು ಅಥವಾ ಶಾಲೆ ಬಿಡುವುದನ್ನು ತಪ್ಪಿಸುವುದನ್ನು ಖಚಿತ ಪಡಿಸಿಕೊಳ್ಳಬೇಕು. (ಸೆಕ್ಷನ್ 11)

(14) ಯಾವುದೇ ಸಂಸ್ಥೆಯು 6–14 ವಯೋಮಾನದ ಮಕ್ಕಳನ್ನು ದಾಖಲು ಮಾಡಿಕೊಂಡು, ಔಪಚಾರಿಕ ಶಿಕ್ಷಣವನ್ನು ನೀಡದೆ, ಧರ್ಮ ಅಥವಾ ಭಾಷೆನ್ನು ಆಧರಿಸಿ ಶಿಕ್ಷಣ ನೀಡುತ್ತಿದ್ದಲ್ಲಿ ಅಂತಹ ಸಂಸ್ಥೆಗಳಿಗೆ ಈ ನಿಯಮದ ಪ್ರಕಾರ ಸರ್ಕಾರವು ದಂಡವನ್ನು ಹಾಕಬೇಕು ಹಾಗೂ ಆ ಮಕ್ಕಳನ್ನು ಹತ್ತಿರದಲ್ಲಿರುವ ನರೆಹೊರೆ ಶಾಲೆಗೆ ದಾಖಲು ಮಾಡಬೇಕು.

(15) ಸದರಿ ನಿಯಮ ಹಾಗೂ ಇದರಲ್ಲಿನ ನಿಯಮಗಳ ಬಗ್ಗೆ ಎಲ್ಲಾ ಹಂತದಲ್ಲಿಯೂ ಸಾರ್ವಜನಿಕರಿಗೆ ತಿಳುವಳಿಕೆ ನೀಡುವ ಕರ್ತವ್ಯವು ರಾಜ್ಯ ಸರ್ಕಾರದ್ದಾಗಿರುತ್ತದೆ.

(16) ಸ್ವಯಂ ಸೇವಕರು ಅಥವಾ ಸಂಸ್ಥೆಗಳು ಪ್ರಾಥಮಿಕ ಶಿಕ್ಷಣದಲ್ಲಿ ಮಾಡುವ ಕೆಲಸಗಳನ್ನು ರಾಜ್ಯ ಸರ್ಕಾರವು ಗುರ್ತಿಸಬೇಕು. ಇಂತಹ ಸಂಸ್ಥೆಗಳನ್ನು ಉತ್ತೇಜಿಸಲು ಸರ್ಕಾರವು ಕ್ರಮ ಕೈಗೊಳ್ಳಬಹುದು.

(17) ಪ್ರತಿ ವರ್ಷವೂ ಸರ್ಕಾರವು 30 ಕ್ಕಿಂತ ಹೆಚ್ಚು ಶಿಕ್ಷಕ–ಮಕ್ಕಳ ಅನುಪಾತವಿರುವ ಶಾಲೆಗಳ ಪಟ್ಟಿಯನ್ನು ಮಾಡಬೇಕು ಹಾಗೂ ಇದನ್ನು ಸಾರ್ವಜನಿಕರ ಗಮನಕ್ಕಾಗಿ ಬಹಿರಂಗ ಪಡಿಸಬೇಕು.

(18) ಸೆಕ್ಷನ್ 5(1)ರ ಪ್ರಕಾರ ಯಾವ ಶಾಲೆಯು 8ನೇ ತರಗತಿಯವರೆಗೆ ಅಭ್ಯಾಸ ಮಾಡುವ ಸೌಲಭ್ಯವನ್ನು ಹೊಂದಿಲ್ಲವೋ, ಅಲ್ಲಿ ಅಭ್ಯಾಸ ಮಾಡುವ ಮಕ್ಕಳನ್ನು ಹತ್ತಿರದಲ್ಲಿರುವ ಶಾಲೆಗೆ ವರ್ಗಾವಣೆ ಮಾಡಿ, ಮಗುವು 8ನೇ ತರಗತಿಯ ಶಿಕ್ಷಣ ಮುಗಿಸಲು ಕ್ಷೇತ್ರ ಶಿಕ್ಷಣಾಧಿಕಾರಿಗಳು ಸೂಕ್ತ ವ್ಯವಸ್ಥೆ ಮಾಡಬೇಕು.

(19) ಪ್ರತಿ ವರ್ಷವೂ ರಾಜ್ಯ ಸರ್ಕಾರವು ಬಜೆಟ್‌ನ ನಂತರ ಈ ನಿಯಮವನ್ನು ಅನುಷ್ಠಾನಗೊಳಿಸಿರುವ ಬಗ್ಗೆ ವರದಿಯನ್ನು ಪ್ರಕಟಿಸಬೇಕು. ವರದಿಯು ಈ ಕೆಳಕಂಡ ವಿಷಯಗಳನ್ನು ಒಳಗೊಂಡಿರಬೇಕು;

(ಎ) ಸದರಿ ನಿಯಮದ ಅನುಷ್ಠಾನಕ್ಕಾಗಿ ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರಗಳು ಮೀಸಲಿಟ್ಟಿರುವ ಮೊತ್ತ.

(ಬಿ) ನಿಯಮದ ಅನುಷ್ಠಾನಕ್ಕಾಗಿ ಅಗತ್ಯವಿರುವ ಅನುದಾನದ ವಿವರ

(ಸಿ) ಮೀಸಲಿಟ್ಟಿರುವ ಅನುದಾನದಲ್ಲಿರುವ ಕೊರತೆ ಅಥವಾ ಹೆಚ್ಚುವರಿಗೆ ಕಾರಣಗಳು.

(ಡಿ)ಭೌತಿಕ ಸೌಲಭ್ಯಗಳಲ್ಲಿ ಹಾಗೂ ಇತರೆ ವಿಷಯಗಳಲ್ಲಿ ತುಂಬಬೇಕಾದಂತಹ ಕೊರತೆಗಳು.

(ಇ) ಇನ್ನೂ ಮುಖ್ಯವಾಹಿನಿಗೆ ತರಬೇಕಾದ ಶಾಲೆ ತೊರೆದ / ಶಾಲೆಯಿಂದ ಹೊರಗುಳಿದ ಮಕ್ಕಳ ವಿವರ.

(ಎಫ್) ಈ ಗ್ಯಾಪ್‌ಗಳನ್ನು ಸರಿಪಡಿಸಲು ಅಗತ್ಯವಿರುವ ಅನುದಾನ.

(ಜಿ) ಸದರಿ ಕಾಯ್ದೆಯ ನಿಯಮವನ್ನು ಮುರಿದಿರುವ ಹಾಗೂ ಅದಕ್ಕೆ ವಿಧಿಸಿದ ದಂಡಗಳ / ವಸೂಲಾತಿಯ ವಿವರ.

**ಭಾಗ – ೩ 'ಬಿ' : ಗುಣಮಟ್ಟ ಶಿಕ್ಷಣವನ್ನು ನೀಡುವಲ್ಲಿ ಸರ್ಕಾರದ ಕರ್ತವ್ಯ.**

5 (1) ರಾಜ್ಯದ ಎಲ್ಲಾ ಶಾಲೆಗಳಲ್ಲಿ ಒಂದೇ ತೆರನಾದ ಉತ್ತಮ ಗುಣಮಟ್ಟ ಶಿಕ್ಷಣವನ್ನು ನೀಡುವುದರ ಬಗ್ಗೆ ಖಾತರಿಪಡಿಸಿಕೊಳ್ಳಬೇಕು ಹಾಗೂ ಗುಣಮಟ್ಟಕ್ಕೆ ಸಂಬಂಧಿಸಿದ ಎಲ್ಲಾ ಚಟುವಟಿಕೆಗಳ ಬಗ್ಗೆ ಪ್ರಮಾಣವನ್ನು ಮತ್ತು ಮಾಪಕಗಳನ್ನು ನಿಗದಿಗೊಳಿಸಬೇಕು. ಈ ಪ್ರಮಾಣಗಳು ಮತ್ತು ಮಾಪಕಗಳು ಸದರಿ ನಿಯಮದಲ್ಲಿ ತಿಳಿಸಿರುವ ಷೆಡ್ಯೂಲ್‌ಗಳಿಗೆ ಪೂರಕವಾಗಿರಬೇಕು.

(2) ಶಾಲೆಯ ಮುಖ್ಯ ಶಿಕ್ಷಕರು ಶಾಲಾ ಹಂತದಲ್ಲಿ ಗುಣಮಟ್ಟ ಶಿಕ್ಷಣದ ನೀಡಿಕೆ ಬಗ್ಗೆ ಖಾತರಿಪಡಿಸಿಕೊಳ್ಳಬೇಕು ಹಾಗೂ ಭೌತಿಕ ಸೌಲಭ್ಯಗಳ ಕೊರತೆಯ ಬಗ್ಗೆ ಸಿ.ಆರ್.ಸಿ.ಯು ತನ್ನ ವ್ಯಾಪ್ತಿಯ ಎಲ್ಲಾ ಶಾಲೆಗಳ ಕೊರತೆಗಳು ಹಾಗೂ ಸಾಧನೆಗಳ ಬಗ್ಗೆ ಬಿ.ಇ.ಓ.ರವರ ಗಮನಕ್ಕೆ ತರಬೇಕು. ಬಿ.ಆರ್.ಸಿ. ಹಾಗೂ ಬಿ.ಇ.ಓ.ರವರು ಕಲಿಕಾ ಮಟ್ಟದ ಬಗ್ಗೆ ಗಮನಿಸಬೇಕು ಹಾಗೂ ಇದನ್ನು ಉತ್ತಮ ಪಡಿಸಲು ಅಗತ್ಯ ಕ್ರಮ ಕೈಗೊಳ್ಳಬೇಕು.

(3)ರಾಜ್ಯವು ಪ್ರತಿ ವರ್ಷಾಂತ್ಯದಲ್ಲಿ ಗ್ರೇಡ್‌ಗಳ ಆಧಾರದಲ್ಲಿ ಪ್ರತಿ ವಿಷಯದಲ್ಲಿನ ಕಲಿಕಾ ಸಾಮರ್ಥ್ಯವನ್ನು ಗುರ್ತಿಸಬೇಕು ಹಾಗೂ ಇದರ ಪರಿಣಾಮದ ಆಧಾರದಲ್ಲಿ ಪಠ್ಯಪುಸ್ತಕ ಹಾಗೂ ಕಲಿಕಾ ಸಾಮಗ್ರಿ ಮತ್ತು ಶಿಕ್ಷಕರ ತರಬೇತಿಯನ್ನು ನಡೆಸಬೇಕು.

(4) ಡಿ.ಎಸ್.ಇ.ಆರ್.ಟಿ. ಯಿಂದ ತಯಾರಿಸಿದ ಕಲಿಕಾ ಸಾಧನಗಳು, ಪಠ್ಯವಿಷಯಗಳು, ಪುಸ್ತಕಗಳ ಮೂಲಕ ವಯಸ್ಸಿಗನುಗುಣವಾದ ಮೂಲ ಜೀವನ ಕೌಶಲ್ಯಗಳನ್ನು ಮಗುವಿನಲ್ಲಿ ಬೆಳೆಸಬೇಕು.

(5)ರಾಜ್ಯದ ಎಲ್ಲಾ ಸರ್ಕಾರಿ, ಅನುದಾನಿತ ಮತ್ತು ಅನುದಾನ ರಹಿತ ಪ್ರಾಥಮಿಕ ಶಾಲೆಗಳಲ್ಲಿ ನಿರಂತರವಾಗಿ ಮಕ್ಕಳ ಕಲಿಕೆಯನ್ನು ರಾಜ್ಯವು ಉಸ್ತುವಾರಿ ಮಾಡಬೇಕು. ಇದರಲ್ಲಿ ಬಾಹ್ಯ ಸಂಸ್ಥೆಯ 5 ಪ್ರತಿಶತ ಮೌಲ್ಯಮಾಪನವೂ ಒಳಗೊಂಡಿರಬೇಕು ಮತ್ತು ಗುಣಮಟ್ಟ ಶಿಕ್ಷಣದ ಬಗ್ಗೆ ರಾಜ್ಯವು ವಾರ್ಷಿಕ ವರದಿಯನ್ನು ತರಬೇಕು.

(6) ಈ ವರದಿಯ ಆಧಾರದ ಮೇಲೆ ನಿಗದಿತ ಸಾಮರ್ಥ್ಯಗಳನ್ನು ಸಾಧಿಸಲು ಸಾಧ್ಯವಾಗದ ಮಕ್ಕಳಿಗಾಗಿ ಸದರಿ ನಿಯಮದ ಉಪ ನಿಯಮ (3) ಮತ್ತು (4)ರಂತೆ ರಾಜ್ಯವು ಪ್ರತಿ ತರಗತಿ / ವಿಷಯದ ಬಗ್ಗೆ ವಿಶೇಷ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಬೇಕು.

(7) ವಿಶೇಷ ತರಬೇತಿಯ ಯಶಸ್ವಿ ಅನುಷ್ಠಾನಕ್ಕಾಗಿ ಶಾಲೆ, ಕ್ಲಸ್ಟರ್ ಮತ್ತು ಬ್ಲಾಕ್ ಮಟ್ಟದಲ್ಲಿ ರಾಜ್ಯವು ಆಯಾ ಹಂತದ ಕರ್ತವ್ಯಗಳನ್ನು ನಿಷ್ಕರ್ಷೆಗೊಳಿಸಬೇಕು.

(8) ಪ್ರತಿ ಶಾಲೆಯಲ್ಲಿ ಗುಣಮಟ್ಟ ಶಿಕ್ಷಣವನ್ನು ನೀಡಿರುವುದನ್ನು ಖಾತರಿ ಪಡಿಸಿಕೊಳ್ಳಲು ರಾಜ್ಯವು ನಿರಂತರವಾಗಿ ಎಲ್ಲಾ ತರಗತಿಗಳ ಕಲಿಕಾ ಗುಣಮಟ್ಟವನ್ನು ಮೌಲ್ಯಮಾಪನ ಮಾಡುವುದು, ಪ್ರತಿ ಮಗುವಿನ ಪ್ರಗತಿ ವಹಿ ನಿರ್ವಹಿಸುವುದು, ಪರಿಹಾರ ಬೋಧನಾ ಕಾರ್ಯಕ್ರಮಗಳನ್ನು ಮಾಡುವುದು ಮತ್ತು ಮಕ್ಕಳ ಕಲಿಕೆಯ ಕಳಪೆ ಗುಣಮಟ್ಟಕ್ಕೆ ಶಾಲೆ ಮತ್ತು ಶಿಕ್ಷಕರನ್ನು ಹೊಣೆಗಾರಿಕೆ ಹೊಂದುವ ಪದ್ಧತಿ ರೂಪಿಸುವುದು.

(9) ರಾಜ್ಯವು ಪ್ರತಿ ಶಾಲೆಗೆ ಪಂಚಾಂಶ ಪಟ್ಟಿ ಆಧಾರದಲ್ಲಿ ಗುಣಮಟ್ಟದ ಸೂಚಕಗಳನ್ನು ನೀಡಿ, ಸ್ಥಾನರೀತ್ಯ ವಿಂಗಡಿಸಬೇಕು. ಕೊನೆಯ ಎರಡು ಗ್ರೇಡ್‌ಗಳಲ್ಲಿ ಬರುವ ಶಾಲೆಗಳಲ್ಲಿ ಪರಿಹಾರ ಬೋಧನೆಯ ಕಾರ್ಯಕ್ರಮಗಳನ್ನು ಕಾಲಮಿತಿಯೊಳಗೆ ನಡೆಸುವುದು. ಸದರಿ ಶಾಲೆಯು ಗ್ರೇಡ್‌ನಲ್ಲಿ ಮೇಲೆ ಬರಲು ಅವಕಾಶವನ್ನು ನೀಡುವುದು.

(10) ರಾಜ್ಯವು ಶಿಕ್ಷಕರ ತರಬೇತಿ ಕಾರ್ಯಕ್ರಮವನ್ನು ಬಾಹ್ಯ ಮೌಲ್ಯಮಾಪನ ಪ್ರಕ್ರಿಯೆಗೆ ಒಳಪಡಿಸಬೇಕು ಮತ್ತು ಈ ಮೌಲ್ಯಮಾಪನ ಅಧ್ಯಯನದ ಆಧಾರದ ಮೇಲೆ ನಿರಂತರವಾಗಿ ಈ ಕಾರ್ಯಕ್ರಗಳ ಸುಧಾರಣೆ ಮಾಡಬೇಕು; ಶಿಕ್ಷಕರು ಪ್ರಮಾಣೀಕೃತ ಗುಣಮಟ್ಟ ತರಬೇತಿಯನ್ನು ಪಡೆಯುವುದನ್ನು ಖಾತರಿ ಪಡಿಸಿಕೊಳ್ಳಬೇಕು.

(11) ರಾಜ್ಯವು ಸೇವಾ ಪೂರ್ವ ಶಿಕ್ಷಕರ ತರಬೇತಿಯಲ್ಲಿ ಗುಣಮಟ್ಟ ಶಿಕ್ಷಣಕ್ಕೆ ಸಾಕಷ್ಟು ಮುಂಜಾಗ್ರತೆ ಕ್ರಮಗಳನ್ನು ಕೈಗೊಳ್ಳಬೇಕು. ಪ್ರತಿ 5 ವರ್ಷಕ್ಕೊಮ್ಮೆ ಪ್ರಾಥಮಿಕ ಶಿಕ್ಷಣದ ಪಠ್ಯವಸ್ತುವಿಗೆ ಸಂಬಂಧಿಸಿದಂತೆ ಸೇವಾ ಪೂರ್ವ ಶಿಕ್ಷಕರ ತರಬೇತಿಯ ಪಠ್ಯವಸ್ತುವನ್ನು ಬದಲಿಸಬೇಕು. ಈ ಸಂಸ್ಥೆಗಳಲ್ಲಿ ಗುಣಮಟ್ಟ ಶಿಕ್ಷಣವನ್ನು ನೀಡುವುದರ ಬಗ್ಗೆ ನಿರಂತರ ಉಸ್ತುವಾರಿ ಮಾಡಬೇಕು ಹಾಗೂ ಎನ್.ಸಿ.ಟಿ.ಇ. ನಿಗದಿಪಡಿಸಿದ ನಿಯಮ ಮತ್ತು ಪ್ರಮಾಣಕ್ಕೆ ತಕ್ಕಂತೆ ನಡೆಸಿದ ಶಿಕ್ಷಕರ ತರಬೇತಿ ಸಂಸ್ಥೆಗಳನ್ನು ಸದರಿ ನಿಯಮವು ಜಾರಿಗೊಂಡ 3 ವರ್ಷದೊಳಗೆ ಮುಚ್ಚಬೇಕು.

(12)ರಾಜ್ಯವು ಪ್ರಾಥಮಿಕ ಶಾಲೆಗಳಲ್ಲಿ ಉಸ್ತುವಾರಿಯನ್ನು ಬಲಪಡಿಸಲು ಉಸ್ತುವಾರಿ ತಂತ್ರಾಂಶಗಳನ್ನು ಅಳವಡಿಸಬೇಕು ಮತ್ತು ಎಲ್ಲಾ ಶಾಲೆಗಳಲ್ಲಿ ಆಗಿಂದಾಗ್ಗೆ ಗುಣಮಟ್ಟದ ಬಗ್ಗೆ ಶೈಕ್ಷಣಿಕ ಮೇಲುಸ್ತುವಾರಿ ನಡೆಸುವ ವ್ಯವಸ್ಥೆ ಮಾಡಬೇಕು.

(13) ಎರಡು ವರ್ಷದೊಳಗೆ ಸಿ.ಆರ್.ಸಿ / ಬಿ.ಆರ್.ಸಿ / ಡಯಟ್ ಮತ್ತು ಡಿ.ಎಸ್.ಇ.ಆರ್.ಟಿ.ಯಂತಹ ಶೈಕ್ಷಣಿಕ ಸಂಸ್ಥೆಗಳಿಗೆ ಸಂಪನ್ಮೂಲ ಸಿಬ್ಬಂದಿಯ ಪೂರೈಕೆಗೆ ಪ್ರತ್ಯೇಕ ಸೇವಾಕ್ಷೇತ್ರ ರಚಿಸಬೇಕು.

(14) ಸದರಿ ಶೈಕ್ಷಣಿಕ ಸಂಸ್ಥೆಯಲ್ಲಿ ಕೆಲಸ ನಿರ್ವಹಿಸುವ ಸಂಪನ್ಮೂಲ ಸಿಬ್ಬಂದಿಗಳು ಒಂದು ತಿಂಗಳಲ್ಲಿ ಕನಿಷ್ಠ 10 ದಿವಸಗಳು ಶಾಲೆಯಲ್ಲಿದ್ದು, ಶಾಲೆಯು ಎದುರಿಸುವ ಸಮಸ್ಯೆಗಳನ್ನು ಅರ್ಥ ಮಾಡಿಕೊಳ್ಳಬೇಕು ಹಾಗೂ ತರಗತಿಯಲ್ಲಿ ಗುಣಮಟ್ಟವನ್ನು ಅಭಿವೃದ್ಧಿ ಪಡಿಸಲು ಶಿಕ್ಷಕರಿಗೆ ಸೂಕ್ತ ಸಹಾಯ ಮಾಡಬೇಕು.

(15)ರಾಜ್ಯವು ಶಾಲೆಯಲ್ಲಿನ ಪುಸ್ತಕಗಳು / ವೃತ್ತ ಪತ್ರಿಕೆಗಳು, ನಕ್ಷೆಗಳು, ಚಾರ್ಟ್‌ಗಳು, ಆಟದ ಸಾಮಗ್ರಿಗಳು, ಪ್ರಯೋಗಾಲಯದಲ್ಲಿನ ಸಲಕರಣೆಗಳ ಲಭ್ಯತೆ ಬಗ್ಗೆ ಹಾಗೂ ಪ್ರತಿ ಶಾಲೆಯಲ್ಲಿ ವಿಜ್ಞಾನ ವಿಷಯದ ಬಗ್ಗೆ ನಡೆಸಬೇಕಾದ ಪ್ರಯೋಗಗಳು, ಪ್ರತಿ ಶಾಲೆಯು ನಡೆಸಬೇಕಾದ ಶೈಕ್ಷಣಿಕ ಭೇಟಿಗಳು, ಮುಂತಾದವುಗಳ ವ್ಯವಸ್ಥೆಯ ಬಗ್ಗೆ ಪ್ರತಿ ಶಾಲೆಯಲ್ಲಿ ಅಭ್ಯಾಸ ಮಾಡುವ ಮಕ್ಕಳ ಸಂಖ್ಯೆಗನುಗುಣವಾಗಿ ಅನುಪಾತ ನಿಯಮವನ್ನು ನಿಗದಿ ಪಡಿಸಬೇಕು.

**ಭಾಗ – 4 : ಶಾಲೆ ಮತ್ತು ಶಿಕ್ಷಕರ ಕರ್ತವ್ಯಗಳು**

6 (1) ಶಾಲೆಯು ಮನೆ ಮನೆ ಸಮೀಕ್ಷೆ ನಡೆಸಿ ತನ್ನ ವ್ಯಾಪ್ತಿಯಲ್ಲಿನ ಎಲ್ಲಾ ಮಕ್ಕಳ ದಾಖಲೆಯನ್ನು ನಿರ್ವಹಿಸಬೇಕು ಹಾಗೂ ಅವರು ಹುಟ್ಟಿದಂದಿನಿಂದ 14ನೇ ವರ್ಷದ ತನಕದ ದಾಖಲೆಯನ್ನು ನಿರ್ವಹಿಸಬೇಕು.

(2) ಶಾಲೆಯು ಪ್ರತಿ ವರ್ಷವೂ ಇಂತಹ ದಾಖಲೆಗಳನ್ನು ಪರಿಷ್ಕರಣೆ ಮಾಡಬೇಕು, ಪಾರದರ್ಶಕವಾಗಿ ಇದನ್ನು ನಿರ್ವಹಿಸಬೇಕು ಮತ್ತು ಇದು ಸಾರ್ವಜನಿಕರಿಗೆ ದೊರೆಯುವ ಬಹಿರಂಗ ವ್ಯವಸ್ಥೆ ಮಾಡಬೇಕು.

(3) ಪ್ರತಿ ಮಗುವಿಗೆ ಸಂಬಂಧಿಸಿದಂತೆ ದಾಖಲೆಯು ಇವುಗಳನ್ನು ಹೊಂದಿರಬೇಕು;

(ಎ) ಹೆಸರು, ಲಿಂಗ, ಹುಟ್ಟಿದ ದಿನಾಂಕ (ಜನನ ಪ್ರಮಾಣ ಪತ್ರದ ಸಂಖ್ಯೆಯೊಂದಿಗೆ, ಜನನ ಸ್ಥಳ

(ಬಿ) ತಂದೆ, ತಾಯಿ / ಪೋಷಕರ ಹೆಸರು, ವಿಳಾಸ, ವೃತ್ತಿ

(ಸಿ) ಮಗುವು ಹಾಜರಾದ ಪೂರ್ವ ಪ್ರಾಥಮಿಕ / ಅಂಗನವಾಡಿ ಕೇಂದ್ರ

(ಡಿ) ಮಗುವು ದಾಖಲಾದ ಪ್ರಾಥಮಿಕ ಶಾಲೆ

(ಇ) ಮಗುವಿನ ಪ್ರಸ್ತುತ ವಿಳಾಸ

(ಎಫ್) ಮಗುವು ಅಭ್ಯಾಸ ಮಾಡುತ್ತಿರುವ ತರಗತಿ ಮತ್ತು ಮಗುವು ಶಾಲೆ ತೊರೆದಲ್ಲಿ ಅದಕ್ಕೆ ಕಾರಣಗಳು

(ಜಿ) ಮಗುವು ದುರ್ಬಲ ವರ್ಗ / ಸೌಲಭ್ಯ ವಂಚಿತ ಗುಂಪು / ವಲಸೆಗಾರರ ಗುಂಪುಗಳಿಗೆ ಸೇರಿದೆಯೇ?

(ಹೆಚ್) ಮಗುವು ವಿಶೇಷ ಅಗತ್ಯವುಳ್ಳ ಗುಂಪಿಗೆ ಸೇರಿದ್ದಲ್ಲಿ, ಮಗುವಿಗೆ ನೀಡಿರುವ ಸೌಲಭ್ಯಗಳು.

(4) ಪ್ರತಿ ಶಾಲೆಯಲ್ಲಿಯೂ ದಾಖಲಾದ / ದಾಖಲಾಗಿಲ್ಲದ / ಶಾಲೆ ತೊರೆದ / ಶಾಲೆ ಬಿಟ್ಟ ಮಕ್ಕಳ ವಿವರವನ್ನು ಸಾರ್ವಜನಿಕವಾಗಿ ಪ್ರಕಟಿಸಿರುವುದನ್ನು ಖಚಿತ ಪಡಿಸಿಕೊಳ್ಳಬೇಕು.

(5) ಶಾಲೆಯು (ಕಾಯಿದೆಯ ವಿಭಾಗ 'ಎನ್' ರಲ್ಲಿನ (3) ಮತ್ತು (4) ವಿಭಾಗ 2) ಎಲ್ಲಾ ಮಕ್ಕಳು (ಸೆಕ್ಷನ್ 12ರ ವಿಭಾಗ (ಸಿ)ಯಲ್ಲಿ ದಾಖಲಾದ ಮಕ್ಕಳೂ ಸೇರಿದಂತೆ) ಮತ್ತು ಬಡತನ ರೇಖೆಯ ಮಕ್ಕಳು ಅಥವಾ ಸೌಲಭ್ಯ ವಂಚಿತ ಮಕ್ಕಳ ಗುಂಪು ಇವರನ್ನು ತರಗತಿಯಲ್ಲಿ / ಮಧ್ಯಾಹ್ನದ ಉಪಹಾರ / ಆಟದ ಮೈದಾನದಲ್ಲಿ ಅಥವಾ ಸಾಮನ್ಯ ಸೌಲಭ್ಯಗಳಾದ ಶೌಚಾಲಯ, ನೀರು, ಗ್ರಂಥಾಲಯ, ಪ್ರಯೋಗಾಲಯ ಮುಂತಾದ ವ್ಯವಸ್ಥೆಯನ್ನು ನೀಡುವಲ್ಲಿ ಬೇಧ ಮಾಡಬಾರದು.

(6) ಪ್ರತಿಶತ 25 ಹಿಸ್ಸೆ ಅಡಿಯಲ್ಲಿ ದಾಖಲಾತಿ ನೀಡುವಾಗ ಸೌಲಭ್ಯವಂಚಿತ ಮಕ್ಕಳಿಗೆ ಆದ್ಯತೆ ನೀಡಬೇಕು.

(7) ನೆರೆಹೊರೆ ಶಾಲೆಯ ಮಿತಿಯು ನಿಯಮ 4(2)ರ ವಿಭಾಗ (ಸಿ) ಸೆಕ್ಷನ್ 12(1)ರಂತಿರುತ್ತದೆ.

ನೆರೆಹೊರೆ ಶಾಲೆಯ ವ್ಯಾಪ್ತಿಯನ್ನು ಗುರ್ತಿಸಿದ್ದು, ಸದರಿ ಶಾಲೆಗಳಿಗೆ ನಿಗದಿತ ಸಂಖ್ಯೆಯ ಮಕ್ಕಳಿಗೆ ಕ್ಲಾಸ್ (ಸಿ)ನ ಸೆಕ್ಷನ್ 12(1)ರಂತೆ ಸೀಟ್ ವ್ಯವಸ್ಥೆ ಮಾಡಲು ಸಾಧ್ಯವಾಗದಂತಹ ಪಕ್ಷದಲ್ಲಿ ಮಾತ್ರ ಉಪನಿರ್ದೇಶಕರು ನೆರೆಹೊರೆ ಶಾಲೆಯ ಮೂಲ ವ್ಯಾಪ್ತಿಯನ್ನು ಹೆಚ್ಚಿಸಬಹುದಾಗಿದೆ.

(8) ಶೇಕಡಾ 100 ರಷ್ಟು ದಾಖಲಾತಿಯ ನಂತರದಲ್ಲಿ ಪ್ರತಿ ದಿನವೂ ಶೇಕಡಾ 100 ರಷ್ಟು ಹಾಜರಾತಿಯಾಗುತ್ತಿರುವ ಬಗ್ಗೆ ಖಚಿತ ಪಡಿಸಿಕೊಳ್ಳಬೇಕು. ಪ್ರತಿ ವಾರದಲ್ಲಿ ಸರಿಯಾಗಿ ಶಾಲೆಗೆ ಹಾಜರಾಗದ ಮಕ್ಕಳ ಪೋಷಕರೊಡನೆ ಚರ್ಚಿಸುವ ವ್ಯವಸ್ಥೆಯನ್ನು ಅಳವಡಿಸಿಕೊಳ್ಳಬೇಕು ಹಾಗೂ ಹಳ್ಳಿ / ವಾರ್ಡ್‌ಗಳ ಪ್ರಾಧಿಕಾರಿಗಳ ಸಹಕಾರ ಪಡೆದು ಶೇಕಡಾ 100ರಷ್ಟು ಹಾಜರಾತಿ ಇರುವಂತೆ ಮಾಡಬೇಕು.

(9) 90 ಶಾಲಾ ದಿನಗಳಿಗಿಂತ ಹೆಚ್ಚು ಗೈರು ಹಾಜರಾಗುವ ಮಕ್ಕಳನ್ನು ಶಾಲೆ ತೊರೆದ ಮಕ್ಕಳ ಗುಂಪಿಗೆ ಸೇರಿಸಬೇಕು ಮತ್ತು ಸದರಿ ಮಕ್ಕಳನ್ನು ಶಾಲೆಗೆ ಹಿಂತಿರುಗಿ ತರಲು ಪರಿಹಾರ ಕ್ರಮಗಳನ್ನು ಕೈಗೊಳ್ಳಬೇಕು.

(10) ಋತುಮಾನ ವಲಸೆ ಗುಂಪಿನ ಮಕ್ಕಳು ವಲಸೆ ಹೋಗುವ ಸಂದರ್ಭದಲ್ಲಿ, ಅಲ್ಲಿನ ಶಾಲೆಗೆ ಸೇರಲು ಶಾಲೆಯಿಂದ ವರ್ಗಾವಣೆ ಪತ್ರ ಪಡೆಯದೇ ಇದ್ದಲ್ಲಿ, ಅವರನ್ನು ಶಾಲೆ ತೊರೆದ ಮಕ್ಕಳೆಂದು ಗುರ್ತಿಸಬೇಕು. ಈ ಮಕ್ಕಳು ಹಿಂತಿರುಗಿದಾಗ, ಶಾಲೆಯು ಆ ಮಕ್ಕಳ ಕಲಿಕಾ ಮಟ್ಟವನ್ನು ಗುರ್ತಿಸಿ, ಪರಿಹಾರ ಬೋಧನೆ ಕ್ರಮಗಳ ಮೂಲಕ ಅವರ ಕಲಿಕೆಯ ಮಟ್ಟವನ್ನು ಸುಧಾರಿಸಿ, ನಿರೀಕ್ಷಿತ ಮಟ್ಟಕ್ಕೆ ತರಬೇಕು.

(11) ಶಾಲೆಯು ಮಕ್ಕಳಿಗೆ ಖಾತರಿಯಾಗಿ ಗುಣಮಟ್ಟ ಶಿಕ್ಷಣವನ್ನು ನೀಡಬೇಕು ಮತ್ತು ಪ್ರತಿ ಮಗುವು ಸಂಬಂಧಿಸಿದ ವಿಷಯಕ್ಕೆ ನಿಗದಿ ಪಡಿಸಿದ ಕಲಿಕೆಯನ್ನು ಸಂಬಂಧಿಸಿದ ಸಾಲಿನಲ್ಲಿ ಸಾಧಿಸುವಂತೆ ಕ್ರಮ ಕೈಗೊಳ್ಳಬೇಕು.

**ಸೆಕ್ಷನ್ 12(2)ರ ನಿಯಮದ ಪ್ರಕಾರ ರಾಜ್ಯ ಸರ್ಕಾರವು ಪ್ರತಿ ಮಗುವಿಗೆ ನೀಡುವ ಶುಲ್ಕ ಮರುಪಾವತಿ.**

7(1) ನೆರೆಹೊರೆ ಶಾಲೆಯೆಂದು ಗುರ್ತಿಸಿದ ಖಾಸಗಿ ಶಾಲೆಗಳಲ್ಲಿ ಮೇಲ್ಕಂಡ ನಿಯಮದಡಿ ಮಗುವಿನ ದಾಖಲೆಯಾದಲ್ಲಿ, ಸರ್ಕಾರವು ಅಂತಹ ದಾಖಲಾತಿಗಳ ಬಗ್ಗೆ ಪರಿಶೀಲಿಸಿ, ಪ್ರತಿ ವರ್ಷವೂ ಪ್ರತಿ ಮಗುವಿಗೆ ತಗಲುವ ವೆಚ್ಚವನ್ನು ಡಿಸೆಂಬರ್ ತಿಂಗಳೊಳಗೆ ಶಾಲೆಗೆ ಮರು ಪಾವತಿಸಬೇಕು. ಇದನ್ನುಳಿದು ಖಾಸಗಿ ಶಾಲೆಯು ಇಂತಹ ಮಕ್ಕಳಿಗೆ ಯಾವುದೇ ರೀತಿಯ ಶುಲ್ಕವನ್ನು ವಿಧಿಸುವಂತಿಲ್ಲ.

(2) ಮೇಲಿನಂತೆ ಶುಲ್ಕ ಪಾವತಿಸಲು ಪ್ರತಿ ಮಗುವಿನ ಶುಲ್ಕದ ವೆಚ್ಚ ಮಾಡುವಾಗ, ರಾಜ್ಯ ಸರ್ಕಾರವು ಸರ್ಕಾರಿ ಅಥವಾ ಸ್ಥಳೀಯ ಪ್ರಾಧಿಕಾರದಿಂದ ನಡೆಸುವ ಶಾಲೆಗಳ ವಾರ್ಷಿಕ ಆವರ್ತಕ ವೆಚ್ಚವನ್ನು ಒಟ್ಟು ದಾಖಲಾದ ವಿದ್ಯಾರ್ಥಿಗಳ ಸಂಖ್ಯೆಯಿಂದ ಭಾಗ ಮಾಡಿದಾಗ ಬರುವ ವೆಚ್ಚವನ್ನು ಪ್ರತಿ ಮಗುವಿನ ಶುಲ್ಕ ಎಂದು ಪರಿಗಣಿಸಬೇಕು. ಇದರಲ್ಲಿ ಅನುದಾನಿತ ಶಾಲೆಯ ವೆಚ್ಚ ಮತ್ತು ಅನುದಾನಿತ ಶಾಲೆಯ ಮಕ್ಕಳ ದಾಖಲಾತಿಯನ್ನು ಸೇರಿಸಬಾರದು. ಪ್ರತಿ ವರ್ಷ ಜೂನ್ ತಿಂಗಳೊಳಗೆ ರಾಜ್ಯವು ಪ್ರತಿ ಮಗುವಿನ ಶುಲ್ಕವನ್ನು ಲೆಕ್ಕ ಮಾಡಿ ಸಾರ್ವಜನಿಕವಾಗಿ ಪ್ರಕಟಿಸಬೇಕು.

(3) ಸರ್ಕಾರದಿಂದ ಮರುಪಾವತಿ ಸ್ವೀಕಾರ ಪಡೆಯುವ ಯಾವುದೇ ಖಾಸಗಿ ಶಾಲೆಯು ಪ್ರತ್ಯೇಕ ಬ್ಯಾಂಕ್ ಖಾತೆ ತೆರೆಯಬೇಕು ಮತ್ತು ಇದು ಸರ್ಕಾರದ ಆಡಿಟ್‌ಗೆ ಒಳಪಡುತ್ತದೆ.

(4) ಸರ್ಕಾರದಿಂದ ಗುರ್ತಿಸಿದ ನೆರೆಹೊರೆ ಶಾಲೆಯಲ್ಲದೇ, ಬೇರೇ ಖಾಸಗಿ ಶಾಲೆಗೆ ಮಗುವು ದಾಖಲಾದಲ್ಲಿ ಮರುಪಾವತಿಯನ್ನು ಪಡೆಯುವಂತಿಲ್ಲ.

(5) ಈ ನಿಯಮದಂತೆ ಯಾವುದೇ ಖಾಸಗಿ ಶಾಲೆಯು ದ್ವಿದಾಖಲಾತಿ / ಸುಳ್ಳು ದಾಖಲಾತಿ ಮಾಡಿ ಸರ್ಕಾರದಿಂದ ಮರುಪಾವತಿ ಪಡೆಯುತ್ತಿಲ್ಲವೆಂಬುದನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳು ಖಚಿತ ಪಡಿಸಿಕೊಳ್ಳಬೇಕು.

(6) ಸರ್ಕಾರಿ ಶಾಲೆಯಲ್ಲಿ ಮಕ್ಕಳಿಗೆ ನೀಡುವ ಉಚಿತ ಸಮವಸ್ತ್ರ, ಉಚಿತ ಪಠ್ಯಪುಸ್ತಕ, ಶಾಲಾ ಬ್ಯಾಗ್, ಸ್ಕಾಲರ್‌ಶಿಫ್, ಮಧ್ಯಾಹ್ನದ ಉಪಹಾರ ಮುಂತಾದ ಸೌಲಭ್ಯಗಳು ಖಾಸಗಿ ಶಾಲೆಯಲ್ಲಿ 25 ಪ್ರತಿಶತ ಪಾಲಿನಡಿ ದಾಖಲಾದ ಮಕ್ಕಳಿಗೂ ಸಿಗುತ್ತಿರುವ ಬಗ್ಗೆ ಖಚಿತ ಪಡಿಸಿಕೊಳ್ಳಬೇಕು.

(7) ಖಾಸಗಿ ಶಾಲೆಯು ಸರ್ಕಾರದಿಂದ ಭೂಮಿ / ಕಟ್ಟಡ / ಪೀಠೋಕರಣ ಅಥವಾ ಉಚಿತ ಅಥವಾ ರಿಯಾಯಿತಿ ದರದಲ್ಲಿ ಪಡೆದಿದ್ದಲ್ಲಿ, ಅಂತಹ ಶಾಲೆಗಳು ಶುಲ್ಕ ಮರುಪಾವತಿಗೆ ಅರ್ಹವಿರುವುದಿಲ್ಲ. ಈ ನಿಯಮವು ಇನಾಂ ಭೂಮಿ, ಭೂದಾನ ಮುಂತಾದ ಜಮೀನುಗಳಲ್ಲಿ ಕಟ್ಟಡ ಕಟ್ಟಿರುವ ಶಾಲೆಗಳಿಗೂ ಅನ್ವಯವಾಗುತ್ತದೆ.

(8) ಸರ್ಕಾರಿ ಅನುದಾನಿತ ಶಾಲೆಯಾದಲ್ಲಿ ಈ ನಿಯಮವು ಶಾಲೆಯು ಸರ್ಕಾರದಿಂದ ಪಡೆಯುವ ಅನುದಾನದ ಮಿತಿಗೊಳಪಟ್ಟು ಮಕ್ಕಳನ್ನು ದಾಖಲು ಮಾಡಿಕೊಳ್ಳುವುದು. ಅನುದಾನಿತ ಶಾಲೆಯಲ್ಲಿ ಖಾಸಗಿ ವಿಭಾಗವಿದ್ದಲ್ಲಿ ಅದನ್ನು ಪ್ರತ್ಯೇಕವಾಗಿ ಉಪನಿಯಮ(1)ರಡಿಯಲ್ಲಿ ಪರಿಗಣಿಸಬೇಕು.

(9) ಸರ್ಕಾರಿ ಶಾಲೆಗಳನ್ನು ಕುರಿತಂತೆ ಸಾದಿಲ್ವಾರು, ಇತರೆ ವೆಚ್ಚಗಳಾದ ಕ್ರೀಡಾ ಶುಲ್ಕ, ಓದುವ ಕೊಠಡಿ ಶುಲ್ಕ, ಪ್ರಯೋಗಾಲಯ ಶುಲ್ಕ, ಗ್ರಂಥಾಲಯ ಶುಲ್ಕ, ಶ್ರವಣ / ದೃಶ್ಯ ಮಾಧ್ಯಮ ಶುಲ್ಕ, ಮುಂತಾದ ಶುಲ್ಕಗಳನ್ನು ಸರ್ಕಾರವೇ ಭರಿಸಬೇಕು. ಇಂತಹ ಶುಲ್ಕವನ್ನು ಶಾಲೆಗೆ ದಾಖಲಾಗುವ ಮಕ್ಕಳ ಸಂಖ್ಯೆಯ ಆಧಾರದ ಮೇಲೆ ಲೆಕ್ಕ ಮಾಡಿ ಪ್ರತಿ ವರ್ಷ 31ನೇ ಆಗಸ್ಟ್ ಒಳಗೆ ನೀಡಬೇಕು.

**ದಾಖಲಾತಿಗಾಗಿ ಕ್ಯಾಪಿಟೇಶನ್ ಶುಲ್ಕ ವಸೂಲಾತಿ ಮತ್ತು ಪರೀಕ್ಷಾ ಪ್ರಕ್ರಿಯೆಯ ತಡೆಗಟ್ಟುವಿಕೆ.**

8(1) ಮಗುವು ಶಾಲೆಗೆ ದಾಖಲಾಗುವ ಸಮಯದಲ್ಲಿ ಅಥವಾ ಶಾಲೆಯಲ್ಲಿರುವ ಸಮಯದಲ್ಲಿ ಆ ಶಾಲೆಯು ಯಾವುದೇ ರೀತಿಯ ಕ್ಯಾಪಿಟೇಶನ್ ಶುಲ್ಕ ಅಥವಾ ಸ್ವಇಚ್ಛಾ ಕಾಣಿಕೆ (ವಾಲೆಂಟರಿ ಡೊನೇಷನ್) ಪಡೆಯುವಂತಿಲ್ಲ. ರಾಜ್ಯ ಸರ್ಕಾರದಿಂದ ನಿಗದಿ ಪಡಿಸಿದ ಬೋಧನಾ ಶುಲ್ಕವನ್ನು (ಟ್ಯೂಷನ್ ಫೀ) ಹೊರತು ಪಡಿಸಿ, ದಾಖಲಾತಿಯ ಸಮಯದಲ್ಲಿ ಅಥವಾ ಶಾಲೆಯಲ್ಲಿರುವ ಸಮಯದಲ್ಲಿ ಯಾವುದೇ ರೀತಿಯ ಒಟ್ಟಾರೆ ಶುಲ್ಕವನ್ನು ಪಡೆಯುವಂತಿಲ್ಲ.

(2) ದಾಖಲಾತಿ ಸಮಯದಲ್ಲಿ ಯಾವುದೇ ಮಗುವಿಗೆ ಯಾವುದೇ ಕಾರಣಕ್ಕೂ ದಾಖಲಾತಿಯನ್ನು ನಿರಾಕರಿಸುವಂತಿಲ್ಲ.

(3) ಶಾಲೆಗೆ ಯಾವುದೇ ತರಗತಿಗೆ ದಾಖಲಾತಿ ಮಾಡಿಕೊಳ್ಳುವ ಸಂದರ್ಭದಲ್ಲಿ ಪ್ರವೇಶ ಪರೀಕ್ಷೆ ನಡೆಸುವಂತಿಲ್ಲ (ಮಕ್ಕಳಿಗೆ / ಪೋಷಕರಿಗೆ ಯಾವುದೇ ರೀತಿಯ ಲಿಖಿತ / ಮೌಖಿಕ ಪರೀಕ್ಷೆ / ಸಂದರ್ಶನ ಇಲ್ಲ.)

(4) ಸದರಿ ನಿಯಮದ ಸೆಕ್ಷನ್ 13ರ ಪ್ರಕಾರ ಈ ನಿಯಮವನ್ನು ಮುರಿದ ಯಾವುದೇ ಶಾಲೆ ದಂಡನೆಗೆ ಒಳಪಡುತ್ತದೆ.

(5) ರಾಜ್ಯ ಸರ್ಕಾರವು ಅನುದಾನ ರಹಿತ ಖಾಸಗಿ ಶಾಲೆಗಳಲ್ಲಿರುವ ಸೌಲಭ್ಯಕ್ಕನುಗುಣವಾಗಿ ಅನುದಾನ ರಹಿತ ಶಾಲೆಗಳ ಗ್ರೇಡ್ ಪಟ್ಟಿ ತಯಾರಿಸಿ, ಅದಕ್ಕೆ ತಕ್ಕಂತೆ ಖಾಸಗಿ ಶಾಲೆಯು ಪಡೆಯಬಹುದಾದ ಶುಲ್ಕವನ್ನು ನಿಗದಿಪಡಿಸಲು ಉತ್ತಮ ಸೂತ್ರವನ್ನು ತಯಾರಿಸಬೇಕು.

(6) ನಿಯಮ 8 ರ ಉಪನಿಯಮ(5)ರಲ್ಲಿ ಅನುಮೋದಿಸಿರುವ ಶುಲ್ಕವನ್ನು ಹೊರತು ಪಡಿಸಿ, ಯಾವುದೇ ರೀತಿಯ ಶುಲ್ಕವನ್ನು ಖಾಸಗಿ ಶಾಲೆಯು ವಸೂಲಿ ಮಾಡುವಂತಿಲ್ಲ. ನಿಯಮದಂತೆ ಪಡೆಯುವ ಶುಲ್ಕದ ವಿವರವನ್ನು ದಾಖಲಾತಿ ಪ್ರಕ್ರಿಯೆ ಸಮಯದಲ್ಲಿ ಪ್ರತಿ ಶಾಲೆಯೂ ಪ್ರಕಟಿಸಬೇಕು ಮತ್ತು ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೂ ಈ ಮಾಹಿತಿ ನೀಡಬೆಕು.

(7) ಸರ್ಕಾರದ 25 ಪ್ರತಿಶತ ಪಾಲಿನಡಿಯಲ್ಲಿ ದಾಖಲಾಗಿರುವ ಮಕ್ಕಳು, ಬಡತನ / ಸೌಲಭ್ಯ ವಂಚಿತ ಗುಂಪುಗಳಿಂದ ಬಂದ ಮಕ್ಕಳು ಹಾಗೂ ಇತರೆ ಮಕ್ಕಳ ನಡುವೆ ಖಾಸಗಿ ಶಾಲೆಯು ಯಾವುದೇ ರೀತಿಯ ತಾರತಮ್ಯ ಮಾಡುವಂತಿಲ್ಲ.

**ನಿಯಮ 14ರ ಪ್ರಕಾರ ಜನನ ದಿನಾಂಕಕ್ಕೆ ಪಡೆಯಬಹುದಾದ ದಾಖಲೆಗಳು**

9.(1) ಪ್ರಾಥಮಿಕ ಶಾಲೆಗೆ ಮಗುವನ್ನು ದಾಖಲು ಮಾಡಿಕೊಳ್ಳಲು 1886ರ ಜನನ, ಮರಣ ಮತ್ತು ವಿವಾಹ ನೋಂದಣಿ ಕಾಯ್ದೆಯಂತೆ ನೀಡಿದ ಜನನ ಪ್ರಮಾಣ ಪತ್ರವನ್ನು ಜನ್ಮ ದಿನಾಂಕದ ದಾಖಲಾತಿಗೆ ಪರಿಗಣಿಸಬಹುದು ಅಥವಾ ಈ ಕೆಳಕಂಡ ದಾಖಲೆಗಳನ್ನು ಪರಿಗಣಿಸಬಹುದು.

ಜನನ ಪ್ರಮಾಣ ಪತ್ರ ಇಲ್ಲದಿದ್ದ ಸಂದರ್ಭದಲ್ಲಿ ಜನ್ಮ ದಿನಾಂಕದ ಆಧಾರಕ್ಕಾಗಿ ಆಸ್ಪತ್ರೆಯ ದಾಖಲೆಗಳು / ಎ.ಎನ್.ಎಮ್, ದಾಖಲೆಗಳು / ಅಂಗನವಾಡಿ ದಾಖಲೆಗಳು, ಸಿ.ಪಿ.ಇ. ದಾಖಲೆಗಳು ಅಥವಾ ತಂದೆ, ತಾಯಿ / ಪೋಷಕರಿಂದ ಡಿಕ್ಲರೇಷನ್ ಪತ್ರವನ್ನು ಪರಿಗಣಿಸಬಹುದು.

(2) ದುಸ್ಥಿತಿಯಲ್ಲಿರುವ ಮಕ್ಕಳಿದ್ದಲ್ಲಿ (ಒಂಟಿ ಇರುವ ಮಕ್ಕಳು, ಪೋಷಕರಿಲ್ಲದ ಮಕ್ಕಳು ಇತರೆ), ಶಾಲೆಯೇ ತನ್ನ ವೆಚ್ಚದಲ್ಲಿ ವಿದ್ಯಾರ್ಹತೆಯುಳ್ಳ ವೈದ್ಯರ ಬಳಿ ಮಗುವನ್ನು ಪರೀಕ್ಷೆ ಮಾಡಿಸಿ, ಅವರಿಂದ ಜನನ ದಿನಾಂಕದ ಪ್ರಮಾಣ ಪತ್ರವನ್ನು ಪಡೆದು ದಾಖಲಾತಿ ಮಾಡಿಕೊಳ್ಳಬಹುದು.

**ನಿಯಮ 15ರ ಪ್ರಕಾರ ಮಗುವಿನ ದಾಖಲಾತಿ**

10.(1) ದಾಖಲಾತಿ ವೇಳೆಗೆ ಮಗುವು ಮುಗಿಸಿರುವ ವರ್ಷಗಳನ್ನು ಪರಿಗಣಿಸುವುದು ಅಥವಾ ಶೈಕ್ಷಣಿಕ ಆರಂಭದ ಮೊದಲ ದಿನಕ್ಕೆ ವರ್ಷವನ್ನು ಲೆಕ್ಕ ಹಾಕುವುದು. ಇಷ್ಟಾದ ಮೇಲೆ 5 ವರ್ಷ ತುಂಬಿದ ಯಾವುದೇ ಮಗುವಿಗೆ ದಾಖಲಾತಿಯನ್ನು ನಿರಾಕರಿಸುವಂತಿಲ್ಲ.

(2) ಪ್ರತಿ ವರ್ಷವೂ ಜೂನ್ 1ನೇ ದಿನಾಂಕವು ಶಾಲಾ ಪ್ರಾರಂಭದ ದಿನಾಂಕವಾಗಿರುತ್ತದೆ. ಶೈಕ್ಷಣಿಕ ವರ್ಷದ ಪ್ರಾರಂಭದಿಂದ 30 ದಿನಗಳವರೆಗೆ ದಾಖಲಾತಿಯನ್ನು ಮಾಡಬಹುದು. ದಾಖಲಾಗದ, ಶಾಲೆ ತೊರೆದ, ಶಾಲೆಯಿಂದ ಹೊರಗುಳಿದ, ತಲುಪಲಾಗದ ಮಕ್ಕಳ ದಾಖಲಾತಿಗಾಗಿ ಸದರಿ ಸಮಯವನ್ನು 6 ತಿಂಗಳವರೆಗೆ ವಿಸ್ತರಿಸುವ ಅಧಿಕಾರವು ರಾಜ್ಯ ಸರ್ಕಾರಕ್ಕಿರುತ್ತದೆ.

(3) ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಅವರಿಗೆ ವಯಸ್ಸಿಗನುಗುಣವಾದ ತರಗತಿಗೆ ದಾಖಲಿಸಿದ ಸಂದರ್ಭದಲ್ಲಿ, ಅವರಿಗೆ ವಿಶೇಷ ತರಬೇತಿಯನ್ನು ನೀಡಿ, ಅವರು ತರಗತಿಯಲ್ಲಿ ಕಲಿಯಲು ಸಹಕರಿಸಬೇಕು.

(4) ವಿಸ್ತರಿಸಿದ ಸಮಯದಲ್ಲಿ ಮಕ್ಕಳು ದಾಖಲಾದಲ್ಲಿ, ಶಾಲೆಯ ಮುಖ್ಯ ಶಿಕ್ಷಕರು ನಿಗದಿಪಡಿಸಿದ ವಿಶೇಷ ತರಬೇತಿಯನ್ನು ನೀಡುವ ಮೂಲಕ ಅವನು / ಅವಳು ವ್ಯಾಸಂಗವನ್ನು ಪೂರ್ಣಗೊಳಿಸಲು ಸಹಕರಿಸಬೇಕು.

**ನಿಯಮ 16ರ ಪ್ರಕಾರ ತರಗತಿಯಲ್ಲಿ ಹಿಂದುಳಿಯುವಿಕೆ ಮತ್ತು ಅನುತ್ತೀರ್ಣತೆಯನ್ನು ತಡೆಗಟ್ಟುವ ಬಗ್ಗೆ.**

11.(1) ಸಂಪೂರ್ಣ ಪ್ರಾಥಮಿಕ ಶಿಕ್ಷಣವನ್ನು ಮುಗಿಸುವವರೆಗೆ ಯಾವುದೇ ತರಗತಿಯಲ್ಲಿ ಮಗುವನ್ನು ಅನುತ್ತೀರ್ಣಗೊಳಿಸುವಂತಿಲ್ಲ.

(2). ಮಗುವು ನಿಗದಿತ ಹಾಜರಾತಿಯನ್ನು ಪಡೆಯಲು ಹಾಗೂ ನಿರಂತರವಾಗಿ ಶಾಲೆಗೆ ಹಾಜರಾಗುವಂತೆ ಮಾಡುವುದು ತಂದೆ, ತಾಯಿ, ಪೋಷಕರು ಹಾಗೂ ಶಿಕ್ಷಕರ ಜಬಾಬ್ದಾರಿಯಾಗಿರುತ್ತದೆ. ಇದಕ್ಕಾಗಿ ಶಾಲೆಯು ಪೋಷಕರನ್ನು ಕೌನ್ಸಿಲಿಂಗ್ ಮಾಡುವ, ನಿರಂತರವಾಗಿ ಮನೆಗಳಿಗೆ ಭೇಟಿ ನೀಡುವ ಮತ್ತು ಶಿಕ್ಷಕರು–ಪೋಷಕರ ಸಭೆಗಳನ್ನು ನಡೆಸುವ ಬಗ್ಗೆ ಕ್ರಿಯಾ ಯೋಜನೆಯನ್ನು ತಯಾರಿಸಬೇಕು.

**ಸೆಕ್ಷನ್ 18ರ ಪ್ರಕಾರ ಶಾಲೆಯನ್ನು ಅಂಗೀಕೃತ ಶಾಲೆಯಾಗಿ ಗುರ್ತಿಸುವ ಬಗ್ಗೆ.**

12.(1) ರಾಜ್ಯ ಸರ್ಕಾರ ಅಥವಾ ಸ್ಥಳೀಯ ಪ್ರಾಧಿಕಾರದ ಶಾಲೆಯನ್ನುಳಿದು, ಈ ನಿಯಮಕ್ಕೆ ಮುಂಚೆ ಪ್ರಾರಂಭವಾದ ಇತರೆ ಎಲ್ಲಾ ಶಾಲೆಗಳು ನಮೂನೆ–1 ರಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಪ್ರಮಾಣ ಪತ್ರವನ್ನು ನೀಡಬೇಕು ಅಥವಾ ಷೆಡ್ಯೂಲ್‌ನಲ್ಲಿರುವ ನಿಯಮ ಮತ್ತು ಪ್ರಮಾಣಗಳೊಡನೆ ಕೆಳಕಂಡ ಷರತ್ತುಗಳಿಗೆ ಬದ್ಧವಾಗಿರಬೇಕು. ;

(ಎ) ಶಾಲೆಯು ಸಮಿತಿ ನೋಂದಣಿ ಕಾನೂನು (ಸೊಸೈಟಿ ರಿಜಿಸ್ಟ್ರೇಷನ್ ಆಕ್ಟ್) 1860 ( 1860ರ 21) ರ ಪ್ರಕಾರ ನೋಂದಾಯಿತ ಸಂಸ್ಥೆಯಿಂದ ನಡೆಸುತ್ತಿರುವ ಶಾಲೆ ಅಥವಾ ಕಾನೂನಿನ ಪ್ರಕಾರ ಮಾಡಿದ ಸಾರ್ವಜನಿಕ ಟ್ರಸ್ಟ್ ನಿಂದ ನಡೆಯುತ್ತಿರುವ ಶಾಲೆ.

(ಬಿ) ಶಾಲೆಯು ಯಾವುದೇ ವೈಯಕ್ತಿಕ, ಗುಂಪಿನ ಅಥವಾ ಸಹಕಾರಿ ಸಂಸ್ಥೆಯ ಲಾಭಕ್ಕಾಗಿ ನಡೆಯುತ್ತಿಲ್ಲ.

(ಸಿ) ಶಾಲೆಯು ಸಂವಿಧಾನಾತ್ಮಕ ಮೌಲ್ಯಗಳಿಗೆ ಬದ್ಧತೆ ಹೊಂದಿದೆ.

(ಡಿ) ಶಾಲೆಯ ಆವರಣವನ್ನು ಶಾಲೆಯ ಸಮಯದಲ್ಲಿ ಮತ್ತು ಶಾಲೆಯು ನಡೆಯುವಾಗ ಇತರೆ ಉದ್ದೇಶಗಳಿಗೆ ಬಳಸುವುದಿಲ್ಲ.

(ಇ) ಸರ್ಕಾರದಿಂದ ಅಧಿಕಾರಯುಕ್ತ ಯಾವುದೇ ಅಧಿಕಾರಿಗಳು ಅಥವಾ ಸ್ಥಳೀಯ ಪ್ರಾಧಿಕಾರದ ಅಧಿಕಾರಿಗಳ ಪರಿವೀಕ್ಷಣೆಗೆ ಶಾಲೆಯು ಸಹಕರಿಸಬೇಕು.

(ಈ) ಶಾಲೆಯು ಇಂತಹ ಅಧಿಕಾರಿಗಳು ನೀಡಿದ ವರದಿಯನ್ನು ಕಾಲ ಕಾಲಕ್ಕೆ ರಾಜ್ಯ ಸರ್ಕಾರದಿಂದ ಅಥವಾ ಯಾವುದೇ ಸರ್ಕಾರದ ಅಧಿಕಾರಿಗಳಿಗೆ ನೀಡಬೇಕು. ಮತ್ತು ಅಂತಹ ವರದಿಯಗಳಂತೆ ಕ್ರಮ ಕೈಗೊಳ್ಳಬೇಕು. ಅಥವಾ ಸ್ಥಳೀಯ ಪ್ರಾಧಿಕಾರವು ಶಾಲೆಯು ಸರ್ಕಾರದಿಂದ ಅಂಗೀಕೃತಗೊಳ್ಳುವ ಸಮಯದಲ್ಲಿ ಸದರಿ ವರದಿಯ ಮೇಲೆ ಕ್ರಮ ಕೈಗೊಂಡಿರುವ ಷರತ್ತನ್ನು ವಿಧಿಸಬಹುದು ಅಥವಾ ಶಾಲೆಯಲ್ಲಿನ ಕೊರತೆಯನ್ನು ನೀಗಿಸಲು ಷರತ್ತನ್ನು ವಿಧಿಸಬಹುದು.

(2). ನಮೂನೆ–1 ರಲ್ಲಿ ನೀಡುವ ಸ್ವಯಂ ಘೋಷಣೆಯನ್ನು ತಮಗೆ ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ನೀಡಬೇಕು ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳವರು ಇದನ್ನು ಪಡೆದ 15 ದಿನಗಳೊಳಗೆ ಸಾರ್ವಜನಿಕ ಪ್ರಕಟಣೆಗೆ ನೀಡಬೇಕು.

(3) ಸ್ವಯಂ ಘೋಷಣೆ ನಮೂನೆಯನ್ನು ಪಡೆದ 3 ತಿಂಗಳೊಳಗೆ ಕ್ಷೇತ್ರ ಶಿಕ್ಷಣಾಧಿಕಾರಿಗಳು ಶಾಲೆಗೆ ಭೇಟಿ ನೀಡಿ, ಉಪ ನಿಯಮ–1 ರಲ್ಲಿ ವಿಧಿಸಿರುವ ನಿಯಮಗಳು ಮತ್ತು ಪ್ರಮಾಣಗಳನ್ನು ಪೂರೈಸಿರುವ ಬಗ್ಗೆ ಪರಿವೀಕ್ಷಣೆ ನಡೆಸಬೇಕು.

(4) ಉಪನಿಯಮ–3 ರಂತೆ ಶಾಲೆಯ ಪರಿವೀಕ್ಷಣೆ ನಡೆಸಿದ ನಂತರ ಕ್ಷೇತ್ರ ಶಿಕ್ಷಣಾಧಿಕಾರಿಗಳು ಪರಿವೀಕ್ಷಣೆಯ ವರದಿಯನ್ನು ಸಾರ್ವಜನಿಕವಾಗಿ ಪ್ರಕಟಿಸಬೇಕು. ನಂತರ ನಿಯಮಗಳನ್ನು ಪೂರೈಸಿದ್ದು,

ಸರ್ಕಾರದಿಂದ ಅಂಗೀಕೃತ ಮಾಡಬಹುದಾದ ಶಾಲೆಗಳ ಪಟ್ಟಿಯನ್ನು ತಯಾರಿಸಿ, ನಮೂನೆ-2ರಲ್ಲಿ ಪರಿವೀಕ್ಷಣೆ ನಡೆಸಿದ 15 ದಿನಗಳೊಳಗೆ ಉಪನಿರ್ದೇಶಕರಿಗೆ ಕಳುಹಿಸಬೇಕು.

(5) ಉಪನಿರ್ದೇಶಕರು ಇಂತಹ ಶಾಲೆಗಳಿಗೆ 15 ದಿನಗಳೊಳಗೆ ಅನುಮೋದನೆ ಮತ್ತು ಅಂಗೀಕೃತ ಆದೇಶವನ್ನು ನೀಡಬೇಕು ಮತ್ತು ಇದನ್ನು ಸಾರ್ವಜನಿಕವಾಗಿ ಪ್ರಕಟಿಸಬೇಕು.

(6) ಶಾಲೆಯು ನಿಯಮ ಮತ್ತು ಪ್ರಮಾಣಗಳಿಗೆ ಹಾಗೂ ಉಪನಿಯಮ –1 ರಲ್ಲಿ ನಮೂದಿಸಿರುವ ಷರತ್ತುಗಳನ್ನು ಪೂರೈಸದಿದ್ದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳು ಸಾರ್ವಜನಿಕ ಆದೇಶದ ಮೇರೆಗೆ 3 ವರ್ಷಗಳ ಅವಧಿಯೊಳಗೆ ಇವುಗಳನ್ನು ಸರಿಪಡಿಸಿಕೊಳ್ಳಲು ಅವಕಾಶ ನೀಡಬೇಕು.

(7) 1.4.2010 ರ ನಂತರ ಮೂರು ವರ್ಷಗಳ ಅವಧಿಯೊಳಗೆ ಷರತ್ತುಗಳನ್ನು ಪೂರೈಸದಿದ್ದಲ್ಲಿ ಸದರಿ ಶಾಲೆಗಳ ಅಂಗೀಕಾರವನ್ನು ಸಂಬಂಧಿಸಿದ ಪ್ರಾಧಿಕಾರವು ಹಿಂತೆಗೆದುಕೊಳ್ಳುವ ಪರಮಾಧಿಕಾರಿವನ್ನು ಹೊಂದಿರುತ್ತದೆ. ಮತ್ತು ಅಂತಹ ಶಾಲೆಗಳು ಕಾರ್ಯ ನಿರ್ವಹಿಸುವಂತಿಲ್ಲ.

(8) ಈ ಕಾಯಿದೆಯ ಅನುಷ್ಠಾನದ ನಂತರ ಪ್ರಾರಂಭವಾದಂತಹ ಶಾಲೆಗಳು ಅಂಗೀಕೃತವಾಗಬೇಕಿದ್ದಲ್ಲಿ, ಉಪನಿಯಮ –1 ರಲ್ಲಿ ಹೇಳಿರುವ ಎಲ್ಲಾ ನಿಯಮ ಮತ್ತು ಪ್ರಮಾಣಗಳ ಷರತ್ತಿಗೊಳಪಡಬೇಕು.

**ನಿಯಮದ ವಿಭಾಗ 18(3) ಮತ್ತು 12(3)ರ ಪ್ರಕಾರ ಶಾಲೆಯ ಅಂಗೀಕರಣವನ್ನು ರದ್ದುಗೊಳಸುವ ಬಗ್ಗೆ.**

13(1) ನಿಯಮ 11 ರಂತೆ ಅಂಗೀಕೃತ ಶಾಲೆಯು ಒಂದು ಅಥವಾ ಹೆಚ್ಚಿನ ಷರತ್ತುಗಳನ್ನು ಮುರಿದಲ್ಲಿ ಅಥವಾ ನಿಯಮದ ಪ್ರಕಾರ ನಡೆಯದಿದ್ದಲ್ಲಿ, ಅಂತಹ ಶಾಲೆಗಳ ಅಂಗೀಕರಣವನ್ನು ನಂಬಬಹುದಾದಂತಹ ಯಾವುದೇ ಲಿಖಿತ ದಾಖಲೆ ದೊರೆತಲ್ಲಿ ಅಥವಾ ಯಾವುದೇ ವ್ಯಕ್ತಿ ಅರ್ಜಿ ಸಲ್ಲಿಸಿದಲ್ಲಿ ಅಂಗೀಕರಣವನ್ನು ರದ್ದುಗೊಳಿಸುವ ಅಥವಾ ಉಪನಿರ್ದೇಶಕರೇ ಖುದ್ದಾಗಿ ಅಂಗೀಕರಣವನ್ನು ರದ್ದುಗೊಳಿಸಲು ಅಧಿಕಾರವನ್ನು ಉಪನಿರ್ದೇಶಕರು ಹೊಂದಿರುತ್ತಾರೆ ಮತ್ತು ನಿಯಮ 11(1) ರ ನಿಯಮವು ಈ ಕೆಳಕಂಡ ಷರತ್ತಗಳಂತೆ ಕ್ರಮ ನಡೆಸಬಹುದಾಗಿರುತ್ತದೆ.

(ಎ) ನಿಯಮವನ್ನು ಅಥವಾ ಷರತ್ತನ್ನು ಮುರಿದ ಶಾಲೆಗೆ ನೋಟೀಸ್ ಜಾರಿ ಮಾಡಿ, ಒಂದು ತಿಂಗಳ ಒಳಗೆ ನೋಟೀಸ್‌ಗೆ ವಿವರಣೆಯನ್ನು ನೀಡಲು ತಿಳಿಸುವುದು.

(ಬಿ) ನಿಗಧಿ ಪಡಿಸಿದ ಸಮಯದೊಳಗೆ ವಿವರಣೆಯು ಬರದಿದ್ದಲ್ಲಿ ಅಥವಾ ಬಂದಿರುವ ವಿವರಣೆಯು ಸಮಂಜಸವಾಗಿಲ್ಲ ಎನಿಸಿದಲ್ಲಿ, ಉಪನಿರ್ದೇಶಕರು 3 ರಿಂದ 5 ಜನರಿರುವಂತೆ ಒಂದು ಸಮಿತಿಯನ್ನು ರಚಿಸಿ ವಿಚಾರಣೆ ನಡೆಸಬೇಕು. ಸದರಿ ಸಮಿತಿಯಲ್ಲಿ ಶಿಕ್ಷಣ ತಜ್ಞರು, ಸಾರ್ವಜನಿಕ ಪ್ರತಿನಿಧಿಗಳು, ಮಾಧ್ಯಮ ಮತ್ತು ಸರ್ಕಾರಿ ಪ್ರತಿನಿಧಿಗಳು ಇರಬೇಕು. ಈ ಸಮಿತಿಯು ವರದಿಯನ್ನು ನೀಡುವುದರೊಂದಿಗೆ ಶಾಲೆಯ ಅಂಗೀಕರಣವನ್ನು ಮುಂದುವರಿಸಬೇಕೆ ಅಥವಾ ರದ್ದುಗೊಳಿಸಬೇಕೆ ಎಂಬ ಬಗ್ಗೆ ಶಿಫಾರಸ್ಸು ಮಾಡಿ ಉಪನಿರ್ದೇಶಕರಿಗೆ ನೀಡಬೇಕು.

(ಸಿ) ಸಮಿತಿಯ ವರದಿಯನ್ನು ಪಡೆದ 15 ದಿನಗಳೊಳಗೆ ಉಪನಿರ್ದೇಶಕರು ಸಮಿತಿಯ ವರದಿಯ ಆಧಾರದ ಮೇಲೆ ನಿರ್ಧಾರ ಕೈಗೊಳ್ಳಬೇಕು. ಇಂತಹ ನಿರ್ಧಾರವನ್ನು ಸಾರ್ವಜನಿಕವಾಗಿ ಪ್ರಕಟಿಸಬೇಕು.

(ಡಿ) ಒಂದು ಪಕ್ಷ ಉಪನಿರ್ದೇಶಕರು ಶಾಲೆಯ ಅಂಗೀಕರಣವನ್ನು ರದ್ದುಪಡಿಸಿದಲ್ಲಿ, ಅದು ಮುಂದಿನ ಶೈಕ್ಷಣಿಕ ವರ್ಷದಿಂದ ಜಾರಿಗೆ ಬರುತ್ತದೆ ಹಾಗೂ ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳು ರದ್ದು ಪಡಿಸಿದ ಶಾಲೆಯಲ್ಲಿನ ಮಕ್ಕಳಿಗೆ ಇತರೆ ನೆರೆಹೊರೆ ಶಾಲೆಯಲ್ಲಿ ದಾಖಲು ಮಾಡುವ ವ್ಯವಸ್ಥೆ ಮಾಡಬೇಕು.

(ಇ) ಈ ವಿಧಿವಿಧಾನ ಹಾಗೂ ಪ್ರಕ್ರಿಯೆಯು ಆರ್.ಟಿ.ಇ. ಅಡಿ ಎಲ್ಲಾ ಶೈಕ್ಷಣಿಕ ಸಂಸ್ಥೆಗಳಿಗೂ ಅನ್ವಯಿಸುತ್ತದೆ. ಶಾಲೆಯು ಮುಂಚೆ ಯಾವುದೇ ಸರ್ಕಾರೀ ನಿಯಮಗಳು ಅಥವ ಪ್ರಾಧಿಕಾರದಿಂದ ಮನ್ನಣೆ ಪಡೆದಿದ್ದರೂ ಕೂಡ ಈ ನಿಯಮವು ಅನ್ವಯಿಸುತ್ತದೆ.

## ಭಾಗ ೫ ಶಾಲಾ ನಿರ್ವಹಣಾ ಸಮಿತಿ [School Management Committee (SMC)]

ಸಂರಚನೆ ಮತ್ತು ಪ್ರಕಾರ್ಯಗಳು (ಕಾಯ್ದೆಯ ಕಲಂ 21 ರ ಪ್ರಕಾರ)

14(1) ಕರ್ನಾಟಕದಲ್ಲಿ ಈಗಾಗಲೇ ಶಾಲಾ ಅಭಿವೃದ್ಧಿ ಮತ್ತು ಉಸ್ತುವಾರಿ ಸಮಿತಿಗಳು () ಈಗಾಗಲೇ ಕಾರ್ಯ ನಿರ್ವಹಿಸುತ್ತಿವೆ; ಆದ್ದರಿಂದ SDMC ಗಳನ್ನು SDMC ಎಂದು ಕರೆಯುತ್ತಿರುವುದನ್ನು ಮುಂದುವರೆಸಲಾಗುತ್ತದೆ. ಅನುದಾನ ರಹಿತ ಶಾಲೆಯನ್ನು ಹೊರತುಪಡಿಸಿ ಉಳಿದೆಲ್ಲ ಶಾಲೆಗಳಲ್ಲಿ SDMC ಗಳು ಅಸ್ತಿತ್ವದಲ್ಲಿರುತ್ತವೆ.

(2) 2006 ರ ಕರ್ನಾಟಕ ಗ್ರಾಮ ಪಂಚಾಯಿತಿಯ ಬೈಲಾಗಳು [SDMC] ಪ್ರಸಕ್ತ ಕಾನೂನುಗಳಿಗೆ ಸಂವಾದಿಯಾಗಿಲ್ಲದಿದ್ದರೆ ಆ ಮಟ್ಟಿಗೆ ಬೈಲಾಗಳ ತಿದ್ದುಪಡಿಯಾಗತಕ್ಕದ್ದು.

(3) ಪ್ರತಿ ಮೂರು ವರ್ಷಕ್ಕೊಮ್ಮೆ ಅಥವ ಹೊಸ ಗ್ರಾಮ ಪಂಚಾಯಿತಿಗಳು ರಚನೆಯಾದಾಗ ಯಾವುದು ಮೊದಲೋ ಆಗ SDMC ಗಳನ್ನು ಪುನರ್ರಚಿಸತಕ್ಕದ್ದು, ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಯವರು (BEO) ಅವರ ಕಾರ್ಯ ಕ್ಷೇತ್ರದ SDMC ಗಳ ಪುನರ್ರಚನೆ ಮತ್ತು ಅವುಗಳ ಕ್ರಮಬದ್ಧ ಕಾರ್ಯ ನಿರ್ವಹಣೆಯನ್ನು ಮೇಲುಸ್ತುವಾರಿ ಮಾಡುವ (Over See) ಪ್ರಾಧಿಕಾರಿಯಾಗಿರುವರು.

(4) SDMC ಯ ಪ್ರತಿಶತ 75 ಭಾಗ ಪ್ರತಿನಿಧಿಗಳು ಮಕ್ಕಳ ತಂದೆ ತಾಯಿಗಳು ಅಥವ ಪೋಷಕರಿಂದ ಆಯ್ಕೆಯಾಗುತ್ತಾರೆ ಹಾಗೂ ಈ ಪ್ರತಿನಿಧಿಗಳ ಸಂಖ್ಯೆ ಅಥವ ತಂದೆ ತಾಯಿ ಪರಿಷತ್ ಇಂತಿರುತ್ತದೆ

| | | |
|---|---|---|
| (ಅ) 150 ಮಕ್ಕಳವರೆಗೆ ಹೊಂದಿರುವ ಶಾಲೆಯಲ್ಲಿ | – | 09 ಸದಸ್ಯರು |
| (ಆ) 150 ರಿಂದ 400 ಮಕ್ಕಳನ್ನು ಹೊಂದಿರುವ ಶಾಲೆಯಲ್ಲಿ | – | 12 ಸದಸ್ಯರು |
| (ಇ) 400 ಕ್ಕೂ ಅಧಿಕ ಸಂಖ್ಯೆ ಹೊಂದಿರುವ ಶಾಲೆಗಳು | – | 15 ಸದಸ್ಯರು |

(5) SDMC ಯ ಉಳಿದ ಪ್ರತಿಶತ 25 ಭಾಗ ಪ್ರತಿನಿಧಿಗಳು ಮುಂದಿನಂತೆ ಇರುತ್ತಾರೆ.

(ಎ) ಮೂರನೇ ಒಂದು ಭಾಗ ಆಯಾ ಗ್ರಾಮ ಪಂಚಾಯಿತಿಯ ನಾಗರಿಕ ಸೇವಾ ಸಮಿತಿಯ ಸದಸ್ಯರು
(ಬಿ) ಮೂರನೇ ಒಂದು ಭಾಗ ಆಯಾ ಶಾಲೆಯಿಂದ ಚುನಾಯಿಸಲ್ಪಟ್ಟ ಶಿಕ್ಷಕರು

(ಸಿ) ಮೂರನೇ ಒಂದು ಭಾಗ ಸ್ಥಳೀಯ ಶಿಕ್ಷಣ ತಜ್ಞರು, ದಾನಿಗಳು ಮತ್ತು ಮಕ್ಕಳು, ಇವರನ್ನು ತಂದೆ ತಾಯಿ ಪರಿಷತ್ ನಿರ್ಧರಿಸುತ್ತದೆ.

(ಡಿ) SDMC ಯ ಪ್ರತಿಶತ 50 ಭಾಗ ಸದಸ್ಯರು ಮಹಿಳಾ ಸದಸ್ಯರಾಗಿರತಕ್ಕದ್ದು.

(ಇ) ತಂದೆ ತಾಯಿ ಪರಿಷತ್ ಸದಸ್ಯರು SDMC ಯ ಅಧ್ಯಕ್ಷರು ಮತ್ತು ಉಪಾಧ್ಯಕ್ಷರನ್ನು ಆಯ್ಕೆ ಮಾಡತಕ್ಕದ್ದು.

(ಎಫ್) ಶಾಲೆಯ ಮುಖ್ಯೋಪಾಧ್ಯಾಯರು SDMC ಯ ಎಕ್ಸ್ ಅಫಿಶಿಯೋ ಸದಸ್ಯ ಕಾರ್ಯದರ್ಶಿಯಾಗಿರುತ್ತಾರೆ.

(6) BEO ಅಥವ ಇವರಿಂದ ಪ್ರತ್ಯಾ ಯೋಜಿಸಲ್ಪಟ್ಟ ಏಜೆನ್ಸಿಯು ಕಾಲಕಾಲಕ್ಕೆ SDMC ಸದಸ್ಯರಿಗೆ ತಮ್ಮ ಪಾತ್ರ, ಜವಾಬ್ದಾರಿ ಮತ್ತು ಪ್ರಸ್ತುತ ಕಾಯ್ದೆಯ ಕಾನೂನು ಕುರಿತಂತೆ ತರಬೇತಿಯನ್ನು ನೀಡತಕ್ಕದ್ದು.

(7) ಕರ್ನಾಟಕ ಗ್ರಾಮ ಪಂಚಾಯಿತಿ ಬೈಲಾ 2006 (SDMC) ವಿಧಿಸುವ ಕಾರ್ಯ ಮತ್ತು ಅಧಿಕಾರಗಳನ್ನು ಚಲಾಯಿಸುವುದರ ಜೊತೆಗೆ ಪ್ರಸ್ತುತ ಕಾಯ್ದೆಯಂತೆ ಮುಂದಿನ ಕಾರ್ಯಗಳನ್ನು ಕೂಡಾ ನಿರ್ವಹಿಸತಕ್ಕದ್ದು.

(ಅ) ಶಾಲಾ ನೆರೆಹೊರೆ ವ್ಯಾಪ್ತಿಯ ಜನರಿಗೆ ಪ್ರಸ್ತುತ ಕಾಯ್ದೆ ಮತ್ತು ಈ ಕಾಯ್ದೆಯಡಿ ರಚಿಸಲಾಗಿರುವ ನಿಯಮಗಳ ಕುರಿತು ಅರಿವನ್ನು ಉಂಟು ಮಾಡುವುದು.

(ಆ) ಕಲಂ 24 ರ (ಎ) ಯಿಂದ (ಇ) ವರೆಗಿನ ಮತ್ತು ಕಲಂ 28 ರಂತೆ ಅನುಷ್ಠಾನಗೊಳ್ಳುವುದನ್ನು ಖಾತ್ರಿಪಡಿಸತಕ್ಕದ್ದು.

(ಇ) ಈ ಕಾಯ್ದೆ ಅನ್ವಯ ಪ್ರತಿ ತಂದೆ ತಾಯಿ / ಪೋಷಕರು ತಮ್ಮ ಮಗುವನ್ನು ಹತ್ತಿರದ ಪ್ರಾಥಮಿಕ ಶಾಲೆಗೆ ಸೇರಿಸುವುದು ಜವಾಬ್ದಾರಿಯಾಗಿದೆ. ಒಂದೊಮ್ಮೆ ತಂದೆ ತಾಯಿ / ಪೋಷಕರು ತಮ್ಮ ಮಗುವನ್ನು ಶಾಲೆಗೆ ಸೇರಿಸಲು ವಿಫಲವಾದರೆ SDMC ಯು ತಂದೆ ತಾಯಿ / ಪೋಷಕರಿಗೆ ನೋಟೀಸ್ ಜಾರಿ ಮಾಡಿ ಮಗುವನ್ನು ಶಾಲೆಗೆ ಸೇರಿಸುವಂತೆ ಮಾಡತಕ್ಕದ್ದು.

(ಈ) ಶಿಕ್ಷಕರು ಶಾಲೆಗೆ ಸರಿಯಾಗಿ ಹಾಜರಾಗುತ್ತಿರುವುದನ್ನು ಮತ್ತು ಶೈಕ್ಷಣಿಕ ಕರ್ತವ್ಯಗಳನ್ನು ಸರಿಯಾಗಿ ನಿರ್ವಹಿಸುತ್ತಿರುವುದನ್ನು ಉಸ್ತುವಾರಿ ಮಾಡತಕ್ಕದ್ದು.

(ಉ) ಮಕ್ಕಳ ಹಾಜರಾತಿಯನ್ನು ನಿರಂತರವಾಗಿ ಉಸ್ತುವಾರಿ ಮಾಡತಕ್ಕದ್ದು.

(ಊ) ಕಲಂ 27 ರಲ್ಲಿ ಸೂಚಿಸಲ್ಪಟ್ಟ ಕರ್ತವ್ಯಗಳನ್ನು ಹೊರತುಪಡಿಸಿ ಯಾವುದೇ ಶೈಕ್ಷಣಿಕವಲ್ಲದ ಕರ್ತವ್ಯಗಳನ್ನು ಅಧ್ಯಾಪಕರು ನಿರ್ವಹಿಸದಂತೆ ಉಸ್ತುವಾರಿ ಮಾಡತಕ್ಕದ್ದು.

(ಎ) ಶಾಲೆಯ ನೆರೆಹೊರೆ ವ್ಯಾಪ್ತಿಯ ಮಕ್ಕಳ ಶಾಲಾ ಪ್ರವೇಶ ಮತ್ತು ನಿರಂತರ ಹಾಜರಾತಿಯನ್ನು ಖಾತ್ರಿಪಡಿಸತಕ್ಕದ್ದು.

(ಏ) ಸದರಿ ಕಾಯ್ದೆಯ ಶೆಡ್ಯೂಲಿನಲ್ಲಿ ವಿವರಿಸಿರುವ ನಿಯಮ (Norms) ಮತ್ತು ಮಾಪನಗಳಂತೆ (Standards) ಉಸ್ತುವಾರಿ ಮಾಡತಕ್ಕದ್ದು.

(ಐ)ಶಿಕ್ಷಕರ ಕುಂದು ಕೊರತೆಗಳನ್ನು ಆಲಿಸುವ ಪ್ರಥಮ ಹಂತದ ಸ್ಥಳೀಯ ಪ್ರಧೀಕಾರವಾಗಿದೆ.

(ಒ) ಅಧ್ಯಾಪಕರು ಅದರಲ್ಲಿಯೂ ಶಿಕ್ಷಕಿಯರಿಗೆ ಒದಗುವ ಕಿರುಕುಳದ ಉಸ್ತುವಾರಿ ಮಾಡಿ ಸುಕ್ತ್ತಕ್ರಮಗಳನ್ನು ತೆಗೆದುಕೊಳ್ಳತಕ್ಕದು.

(ಓ) ಮಗುವಿನ ಹಕ್ಕು ಉಲಂಘನೆ ; ಶಾಲಾಪ್ರವೇಶ ನಿರಾಕರಣೆ, ವಂಚಿತ ವರ್ಗದ ಮಕ್ಕಳಿಗೆ ಕಿರುಕುಳ, ಉಚಿತ ಸಮವಸ್ತ್ರ, ಪಠ್ಯ ಪುಸ್ತಕ ಮುಂತಾದ ಪ್ರೋತ್ಸಾಹಕಗಳನ್ನು ನೀಡದಿರುವ ಅಥವಾ ವಿಳಂಬ ಮುಂತಾದ ಪ್ರಕರಣಗಳನ್ನು ಸಂಬಂದಿಸಿದ ಪ್ರಾಧಿಕಾರಿಯ ಗಮನಕ್ಕೆ ತರುವುದು.

(ಔ) ಶಾಲೆಯ ಅಗತ್ಯತೆಗಳನ್ನು ಗುರುತಿಸಿ ಶಾಲೆಯ ಅಭಿವೃದ್ದಿ ಯೋಜನೆಯನ್ನು (School Development Plan) ತಯಾರಿಸುವುದು.

(ಅಂ) ವಿಷೇಶ ಅಗತ್ಯತೆಯುಳ್ಳ ಮಕ್ಕಳ ಪ್ರವೇಶ, ಅವರ ಶಿಕ್ಷಣ, ಅವರಿಗೆ ದೊರೆಯಬೇಕಾದ ಸೌಲಭ್ಯಗಳ ಕುರಿತು ಉಸ್ತುವಾರಿಯನ್ನು ಮಾಡತಕ್ಕದ್ದು.

(ಅಃ) ಮಧ್ಯಾಹ್ನ ಉಪಹಾರ ಯೋಜನೆ ಮತ್ತು ಇತರೆ ಪ್ರೋತ್ಸಾಹಕ ಯೋಜನೆಗಳನ್ನು ಉಸ್ತುವಾರಿ ಮಾಡತಕ್ಕದ್ದು.

(ಕ)ಪ್ರತಿ ವರ್ಷ 31 ಮೇ ತಿಂಗಳೊಳಗೆ ಅದರ ಹಿಂದಿನ ವರ್ಷದ ಶಾಲೆಯ ವಾರ್ಷೀಕ ಲೆಕ್ಕಪತ್ರವಾದ ಜಮೆ ಮತ್ತು ಖರ್ಚಿಗೆ ಸಂಬಂಧಿಸಿದಂತೆ ವಿವರಗಳನ್ನು ತಯಾರಿಸಿ ಶಾಲೆಯ ಮುಖ್ಯೋಧ್ಯಾಯರು ಮತ್ತು ಅಧ್ಯಕ್ಷರು ಸಹಿ ಮಾಡಿ ಧೃಡಿಕರಿಸುವುದು ಹಾಗೂ ಅದನ್ನು ಎಸ್.ಡಿ.ಎಂ.ಸಿ ಮುಂದೆ ಮಂಡಿಸುವುದು, ಜೊತೆಗೆ ಈ ದಾಖಲೆಯು ಸಾರ್ವಜನಿಕವಾಗಿ ಲಭ್ಯವಾಗುವಂತೆ ನೋಡಿಕೊಳ್ಳತಕ್ಕದ್ದು.

(ಖ)ಈ ಕಾಯ್ದೆಯ ಜಾರಿಯಲ್ಲಿ ಎಸ್.ಡಿ.ಎಂ.ಸಿಗೆ ಬರುವ ಎಲ್ಲಾ ಹಣವನ್ನು ಒಂದು ಪ್ರತ್ಯೇಕ ಅಕೌಂಟಿನಲ್ಲಿ ಇಡತಕ್ಕದ್ದು ಮತ್ತು ಇಲಾಖೆಯು ನಡೆಸುವ ಲೆಕ್ಕ ತಪಾಸಣೆಗೆ ದಾಖಲೆಗಳನ್ನು ಒದಗಿಸತಕ್ಕದ್ದು.

(8) ಖಾಸಗಿ ಅನುದಾನ ರಹಿತ ಶಾಲೆಗಳಲ್ಲಿ, ಆಡಳಿತ ಸಂಸ್ಥೆಯು ಪೋಷಕ–ಶಿಕ್ಷಕರ ಸಮಿತಿಯನ್ನು ರಚಿಸಿ, ಉಪನಿಯಮ–9ರಲ್ಲಿ ಹೇಳಿರುವಂತಹ ಎಲ್ಲಾ ಚಟುವಟಿಕೆಗಳನ್ನು ಹಮ್ಮಿಕೊಳ್ಳಬೇಕು.

**ಶಾಲಾ ಅಭಿವೃದ್ಧಿ ಯೋಜನೆ ತಯಾರಿಕೆ:**

15.(1) ಈ ಕಾಯ್ದೆಯಡಿ ರಚನೆಯಾದ SDMC ಯು ಪ್ರತಿ ಆರ್ಥಿಕ ವರ್ಷವು ಕೊನೆಗೊಳ್ಳುವ 03 ತಿಂಗಳ ಮುನ್ನ ಒಂದು ಶಾಲಾ ಅಭಿವೃದ್ಧಿ ಯೋಜನೆಯನ್ನು ತಯಾರಿಸತಕ್ಕದ್ದು.

(2) ಶಾಲಾ ಅಭಿವೃದ್ಧಿಯ ಮೊದಲ ಭಾಗವು ಮೂರು ವರ್ಷದ ಯೋಜನೆಯಾಗಿದ್ದು ಮೂರು ವರ್ಷಗಳ ಉಪಯೋಜನೆಯನ್ನು ಹೊಂದಿರತಕ್ಕದ್ದು ಹಾಗೂ ಮುಂದಿನವುಗಳನ್ನು ಇದು ಹೊಂದಿರತಕ್ಕದ್ದು.

(ಎ) ತರಗತಿವಾರಿ ದಾಖಲಾತಿಯ ಅಂದಾಜು.

(ಬಿ) 1 ರಿಂದ 5 ಮತ್ತು 6 ರಿಂದ 8ನೇ ಇಯತ್ತೆಯ ಮಕ್ಕಳ ಸಂಖ್ಯೆಗೆ ಅನುಗುಣವಾಗಿ ಮೂರು ವರ್ಷಗಳವರೆಗೆ ನಿಯಮಾನುಸಾರ ಅಗತ್ಯವಿರುವ ಪ್ರತ್ಯೇಕ ಹೆಚ್ಚುವರಿ ಅಧ್ಯಾಪಕರ ಹುದ್ದೆಗಳು.

(ಸಿ) ಮಕ್ಕಳ ಸಂಖ್ಯೆಗೆ ಅನುಗುಣವಾಗಿ ಮೂರು ವರ್ಷಗಳ ಅವಧಿಗೆ ಬೇಕಾಗಬಹುದಾದ ಹೆಚ್ಚುವರಿ ಭೌತಿಕ ಸೌಲಭ್ಯಗಳು [ಕೊಠಡಿ, ಪಾಠೋಪಕರಣ, ಪೀಠೋಪಕರಣ, ಕ್ರೀಡಾ ಸಾಮಾಗ್ರಿ, ಗ್ರಂಥ ಭಂಡಾರದ ಪುಸ್ತಕಗಳು, ಪ್ರಯೋಗಾಲಯ ವಸ್ತುಗಳು - ಇತ್ಯಾದಿ).

(ಡಿ) (ಅ) ಮತ್ತು (ಇ) ನಲ್ಲಿ ಸೂಚಿಸಿರುವ ಅಗತ್ಯಗಳ ಅನುಸಾರ ಮೂರು ವರ್ಷಗಳ ಅವಧಿಯವರೆಗೆ ಬೇಕಾಗಬಹುದಾದ ಹೆಚ್ಚುವರಿ ಹಣಕಾಸಿನ ಅಂದಾಜನ್ನು ಮಾಡತಕ್ಕದ್ದು. ಈ ಅಂದಾಜು – ಸೇತುಬಂಧ, ಶಿಕ್ಷಕರಿಗೆ ನೀಡುವ ವಿಶೇಷ ತರಬೇತಿ, ಮಕ್ಕಳಿಗೆ ಒದಗಿಸಬೇಕಾದ ಸೌಲಭ್ಯಗಳಿಗೆ ತಗಲುವ ಖರ್ಚು ಮತ್ತು ಈ ಕಾಯ್ದೆಯಂತೆ ನಿರ್ವಹಿಸಬೇಕಾದ ಜವಾಬ್ದಾರಿಯಲ್ಲಿ ಬರುವ ಖರ್ಚುಗಳನ್ನು ಇದು ಒಳಗೊಂಡಿರತಕ್ಕದ್ದು.

(3) ಈ ಯೋಜನೆಯ ಎರಡನೇ ಭಾಗವು ಶಾಲೆಯ ಶೈಕ್ಷಣಿಕ ಅಭಿವೃದ್ಧಿಗೆ ಸಂಬಂಧಿಸಿದೆ. ಇದು ಶಾಲೆಯ ಶೈಕ್ಷಣಿಕ ಚಟುವಟಿಕೆಗಳ ಸುಧಾರಣೆಗೆ ಸಂಬಂಧಿಸಿದಂತೆ ವಿವರಗಳನ್ನು ವಾರ್ಷಿಕವಾಗಿ ಯೋಚಿಸಲಾಗಿರುತ್ತದೆ.

(I) ನಿರಂತರ ಮತ್ತು ಸಮಗ್ರ ಮೌಲ್ಯಮಾಪನ ಕ್ರಮಗಳ ಅವಲೋಕನ.

(II) SDMC ಸಭೆಗಳಲ್ಲಿ ಮಕ್ಕಳ ಶೈಕ್ಷಣಿಕ ಪ್ರಗತಿಯ ಅವಲೋಕನ.

(III) ಅಧ್ಯಾಪಕ, ಪೋಷಕ ಸಭೆ ಮತ್ತು ಸಮುದಾಯ ಭಾಗವಹಿಸುವ ಇತರ ಸಭೆಗಳಲ್ಲಿ ಮಕ್ಕಳ ಶೈಕ್ಷಣಿಕ ಪ್ರಗತಿಯನ್ನು ಆವರ್ತಕಾಲದಲ್ಲಿ () ಅವಲೋಕನ.

(IV) ಶಾಲೆಯಿಂದ ಹೊರಗುಳಿದ ಮಕ್ಕಳ, ಶಾಲೆ ತೊರೆದ ಮಕ್ಕಳ ಮತ್ತು ನಿರೀಕ್ಷಿತ ಕಲಿಕಾ ಮಟ್ಟವನ್ನು ಸಾಧಿಸಲಾಗದ ಮಕ್ಕಳಿಗೆ ಪರಿಹಾರ ಬೋಧನೆಯನ್ನು ಯೋಚಿಸುವುದು.

(V) ಸಮುದಾಯ ಸಂಪನ್ಮೂಲವನ್ನು ಶಾಲೆಯ ಶೈಕ್ಷಣಿಕ ಚಟುವಟಿಕೆಗಳಿಗೆ ಉಪಯೋಗಿಸುವುದು.

(VI) ಮೇಳ, ಪ್ರದರ್ಶನ, ಶೈಕ್ಷಣಿಕ ಭೇಟಿಗಳನ್ನು ಸಂಘಟಿಸುವುದು.

(VII) ಸಹ ಪಠ್ಯ ಚಟುವಟಿಕೆಗಳು ಮತ್ತು ಶಾಲಾ ಮಟ್ಟದ ಸ್ಪರ್ಧೆಗಳು

(4) ಶಾಲಾ ಅಭಿವೃದ್ಧಿ ಯೋಜನೆಯನ್ನು SDMC ಯ ಅಧ್ಯಕ್ಷರು / ಉಪಾಧ್ಯಕ್ಷರು ಮತ್ತು ಕಾರ್ಯದರ್ಶಿಯವರು ಸಹಿ ಮಾಡಿ – ಮೊದಲ ಭಾಗವನ್ನು ಆರ್ಥಿಕ ವರ್ಷದ ಕೊನೆಯೊಳಗೂ ಮತ್ತು ಎರಡನೇ ಭಾಗವನ್ನು ಜೂನ್ ತಿಂಗಳ ಕೊನೆಯೊಳಗೂ ಕಳುಹಿಸತಕ್ಕದ್ದು.

(5) ಈ ಯೋಜನೆಗಳನ್ನು ಕ್ಲಸ್ಟರ್ ಮತ್ತು ಬ್ಲಾಕ್ ಹಂತದಲ್ಲಿ ಸಂಚಯನ ಮಾಡತಕ್ಕದ್ದು ಹಾಗೂ ರಾಜ್ಯವು ಪ್ರತಿ ಬ್ಲಾಕಿಗೆ ಹಣವನ್ನು ನಿಗದಿ ಮಾಡುವುದಕ್ಕೆ ಈ ಯೋಜನೆಗಳು ಆಧಾರವಾಗಿರುತ್ತವೆ.

## ಭಾಗ : VI - ಅಧ್ಯಾಪಕರು

ಕಾಯ್ದೆಯ 23 (1) ರ ಪ್ರಕಾರ ಕನಿಷ್ಠ ವಿದ್ಯಾರ್ಹತೆ.

16. (1) ಯುಕ್ತ ಶೈಕ್ಷಣಿಕ ಪ್ರಾಧಿಕಾರದ ಶಿಫಾರಸ್ಸಿನೊಂದಿಗೆ ರಾಜ್ಯ ಸರ್ಕಾರವು ಪ್ರಕರಣ 23 ಖಂಡ (1) ರ ಪ್ರಕಾರ ಎಲಿಮೆಂಟರಿ ಶಾಲೆಯಲ್ಲಿ ಕೆಲಸ ಮಾಡುವ ಅಧ್ಯಾಪಕರ ಕನಿಷ್ಠ ವಿದ್ಯಾರ್ಹತೆಯನ್ನು ನಿಗದಿಗೊಳಿಸತಕ್ಕದ್ದು.

(2) ಮೇಲ್ಕಂಡ ಖಂಡದಂತೆ ನಿಗದಿಯಾದ ಕನಿಷ್ಠ ವಿದ್ಯಾರ್ಹತೆಯು ಪ್ರಕರಣ 2 ಖಂಡ (ಎನ್) ನಲ್ಲಿ ಉಲ್ಲೇಖಿಸಿರುವ ಪ್ರತಿ ಶಾಲೆಗೆ ಅನ್ವಯವಾಗತಕ್ಕದ್ದು.

(3) ಆದಾಗ್ಯೂ ನೇಮಕಾತಿ ಪ್ರಾಧಿಕಾರವು ಉನ್ನತ ವಿದ್ಯಾರ್ಹತೆಯುಳ್ಳ ತರಬೇತಿ ಹೊಂದಿದ ಅಧ್ಯಾಪಕರನ್ನು ನೇಮಕ ಮಾಡಿಕೊಳ್ಳಬಹುದು.

ಪ್ರಕರಣ 24 (1) ರ ಪ್ರಕಾರ ಅಧ್ಯಾಪಕರ ಕರ್ತವ್ಯಗಳು

17 (1) ಎಲ್ಲಾ ಶಿಕ್ಷಕರು ಪ್ರಕರಣ 24(1) ರಲ್ಲಿ ಹೇಳಿರುವ ಎಲ್ಲಾ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು.
(2) ಜೊತೆಗೆ ಪ್ರತಿ ವಿದ್ಯಾರ್ಥಿಯ ಪ್ರಗತಿಯ ಸಂಚಿತ ದಾಖಲೆಯನ್ನು ಪ್ರತಿ ಶಿಕ್ಷಕರೂ ಹೊಂದಿರತಕ್ಕದ್ದು. ಪ್ರಕರಣ 30 ಖಂಡ (2) ರಲ್ಲಿ ಉಲ್ಲೇಖಿಸಿರುವಂತೆ ಪೂರ್ಣಗೊಳಿಸಿದ ಪ್ರಮಾಣ ಪತ್ರವನ್ನು ಕೊಡಲು ಈ ದಾಖಲೆಗಳು ಆಧಾರವಾಗಿರುತ್ತವೆ.
(3) ಪ್ರತಿ ವಿದ್ಯಾರ್ಥಿಯ ಕಲಿಕಾ ಪ್ರಗತಿಯನ್ನು ಆವರ್ತ ಕಾಲದಲ್ಲಿ ಪಠ್ಯಕ್ರಮದಲ್ಲಿ ತಿಳಿಸಿರುವಂತೆ ಅಳೆಯವುದು ಮತ್ತು ನಿರೀಕ್ಷಿತ ಕಲಿಕಾ ಮಟ್ಟವನ್ನು ತಲುಪಿಲ್ಲದ ವಿದ್ಯಾರ್ಥಿಗಳಿಗೆ ಪ್ರತಿ ವಿಷಯದಲ್ಲಿ ಪರಿಹಾರ ಬೋಧನೆಯನ್ನು ಕೈಗೊಳ್ಳತಕ್ಕದ್ದು. ಮೌಲ್ಯಮಾಪನವನ್ನು ಅನುಷ್ಠಾನಗೊಳಿಸಲು ಯುಕ್ತವಾದ ಮಾರ್ಗದರ್ಶಿ ಸೂತ್ರಗಳನ್ನು ತಯಾರಿಸತಕ್ಕದ್ದು.
(4) ಪ್ರಸ್ತುತ ಆವರ್ತ ಕಾಲದ ಮಗುವಿನ ಮೌಲ್ಯಮಾಪನದ ಜೊತೆಗೆ, ಮೌಲ್ಯಮಾಪನ ಅಧ್ಯಯನ ವರದಿಯ ಅಂಶಗಳೂ ಸಹ ಕೈಗೊಳ್ಳುವ ಪರಿಹಾರ ಬೋಧನೆಗೆ ಬುನಾದಿಯಾಗಿರತಕ್ಕದ್ದು.
(5) ಶಾಲೆಯ ಶೈಕ್ಷಣಿಕ ಕಾರ್ಯಗಳಿಗೆ ನಿರಂತರವಾಗಿ ಧಕ್ಕೆಯಾಗದ ರೀತಿಯಲ್ಲಿ ಅಧ್ಯಾಪಕರು CRP/BRC/DIET ಗಳ ಆಯೋಜಿಸುವ ತರಬೇತಿಗಳು, ಪಠ್ಯಕ್ರಮ ಪಠ್ಯಪುಸ್ತಕ ತರಬೇತಿ ಸಂಚಿ – ಕಲಿಕಾ ಬೋಧನಾ ಉಪಕರಣಗಳ ತಯಾರಿಕೆ ಕಾರ್ಯಾಗಾರಗಳಲ್ಲಿ ಹಾಜರಾಗತಕ್ಕದ್ದು.
(6) ಮಗುವಿನಲ್ಲಿ ಶಿಸ್ತು ಮೂಡಿಸಬೇಕೆಂಬ ದೃಷ್ಟಿಯಿಂದ ಮಗುವಿಗೆ ದೈಹಿಕ ದಂಡತಿ, ಮಾನಸಿಕ ಹಿಂಸೆ ಅಥವ ಇನ್ನಾವುದೇ ವಿಧವಾದ ನಿಂದನೆಯನ್ನು (Abuse = ಅಪಸಂಬ್ರಾಳಿಕೆ ) ಮಾಡತಕ್ಕದ್ದಲ್ಲ.

**ಪ್ರಕರಣ 24 (3) ರ ಪ್ರಕಾರ ಅಧ್ಯಾಪಕರ ಕುಂದುಕೊರತೆಗಳ ನಿವಾರಣಾ ವ್ಯವಸ್ಥೆ.**

18(1) ಪ್ರಕರಣ 21 ರ ಅಡಿಯಲ್ಲಿ ರಚಿಸಲಾಗಿರುವ SDMC ಯು ಆಯಾ ಶಾಲಾ ಶಿಕ್ಷಕರ ಕುಂದುಕೊರತೆಗಳ ಪ್ರಥಮ ಹಂತದ ನಿವಾರಣಾ ವ್ಯವಸ್ಥೆಯಾಗಿರುತ್ತದೆ.

(2) ರಾಜ್ಯ ಸರ್ಕಾರವು ಜಿಲ್ಲೆಯ ಹಂತದಲ್ಲಿ ಶಾಲಾ ನ್ಯಾಯ ಮಂಡಳಿಗಳನ್ನು [School Tribunals] ಅಧ್ಯಾಪಕರ ಕುಂದುಕೊರತೆ ನಿವಾರಣೆಗಾಗಿ ರಚಿಸತಕ್ಕದ್ದು. ಪ್ರತಿ ನ್ಯಾಯ ಮಂಡಳಿಯ 03 ಮಂದಿ ಸದಸ್ಯರನ್ನು ಹೊಂದಿರುತ್ತದೆ. ಇದರ ಅಧ್ಯಕ್ಷರು ನ್ಯಾಯಿಕ ಕ್ಷೇತ್ರದಿಂದಲೂ ಮತ್ತು ಉಳಿದ ಎರಡು ಮಂದಿ ಪ್ರಾಥಮಿಕ ಶಿಕ್ಷಕರ ಕ್ಷೇತ್ರದಿಂದ ಬಂದವರಾಗಿರುತ್ತಾರೆ.

**ಪ್ರಕರಣ 25 ರ ಪ್ರಕಾರ ವಿದ್ಯಾರ್ಥಿ ಶಿಕ್ಷಕ ಅನುಪಾತ (Pupil Teacher Ratio = PTR)**

19 (1) ಸದರಿ ಕಾಯ್ದೆಯ ಶೆಡ್ಯೂಲಿನಲ್ಲಿ ನಿಗದಿಪಡಿಸಿರುವಂತೆ ಪ್ರತಿ ಶಾಲೆಯ PTR ನಿರ್ವಹಣೆಯ ಜವಾಬ್ದಾರಿ ಆಯಾ ಶೈಕ್ಷಣಿಕ ಬ್ಲಾಕಿನ ಕ್ಷೇತ್ರ ಶಿಕ್ಷಣಾಧಿಕಾರಿಯವರದಾಗಿದೆ.

(2) ತಮ್ಮ ವ್ಯಾಪ್ತಿಯ - ಶಾಲೆಗಳಿಗೆ ಮಂಜೂರಾಗಿರುವ ಶಿಕ್ಷಕರ ಹುದ್ದೆಯ ವಿವರವನ್ನು ಪ್ರತಿ ಶಾಲೆಗೆ ಅನ್ವಯಿಸಿದಂತೆ ಕ್ಷೇತ್ರ ಶಿಕ್ಷಣಾಧಿಕಾರಿಯವರು ಪ್ರಕಟಿಸತಕ್ಕದ್ದು.

(3) ಪ್ರತಿ ವರ್ಷ ಜುಲೈ ಮಾಹೆಯಲ್ಲಿ ಪ್ರತಿ ಶಾಲೆಯ PTR ಪರಿಶೀಲಿಸಿ DDPI ರವರ ಅನುಮತಿ ಪಡೆದು ಹೆಚ್ಚುವರಿ ಶಿಕ್ಷಕರನ್ನು ಸ್ಥಳಾಂತರಿಸಲು (VI) ಶಾಲಾ ಹಂತದಲ್ಲಿ ಸಹಪಠ್ಯ ಚಟುವಟಿಕೆಗಳು ಮತ್ತು ಸ್ಪರ್ಧೆಗಳ ಏರ್ಪಾಟು.

(4) ಶಿಕ್ಷಕರ ಹುದ್ದೆಯು ಖಾಲಿಯಾದ ಒಂದು ವಾರದೊಳಗೆ ನೇಮಕಾತಿ ಪ್ರಾಧಿಕಾರಕ್ಕೆ ವರದಿ ಮಾಡತಕ್ಕದ್ದು ಮತ್ತು ತಮ್ಮ ಕಚೇರಿಯ ಪ್ರಕಟಣಾ ಫಲಕದಲ್ಲಿ ತಮ್ಮ ಖಾಲಿ ಹುದ್ದೆಯ ಬ್ಲಾಕಿನ ಸ್ಥಿತಿ ಮತ್ತು ಖಾಲಿ ಹುದ್ದೆಯ ಪಟ್ಟಿಯನ್ನು ಪ್ರಕಟಿಸತಕ್ಕದ್ದು.

(5) ಖಾಲಿ ಹುದ್ದೆಗಳನ್ನು ; ಅವು ಉದ್ಭವಿಸಿದ 90 ದಿನಗಳೊಳಗೆ ಭರ್ತಿ ಮಾಡತಕ್ಕದ್ದು.

(6) ಖಾಸಗಿ ಶಾಲೆಗಳ ಸಂದರ್ಭದಲ್ಲಿ ಶಾಲಾ ಆಡಳಿತ ಮಂಡಳಿಗಳು ಕಾಯ್ದೆಯ ಶೆಡ್ಯೂಲಿನಲ್ಲಿರುವಂತೆ PTR ರೂಢಿಸತಕ್ಕದ್ದು, ಹಾಗೂ ಖಾಲಿ ಹುದ್ದೆಗಳನ್ನು ರಾಜ್ಯ ಸರ್ಕಾರ ಹೊಂದಿರುವ ನಿಯಮಾವಳಿಗಳ ಪ್ರಕಾರ ಖಾಲಿ ಹುದ್ದೆ ಉದ್ಭವಿಸಿದ 90 ದಿನಗಳೊಳಗೆ ಭರ್ತಿ ಮಾಡತಕ್ಕದ್ದು.

**ಭಾಗ–7 ಪಠ್ಯಕ್ರಮ ಮತ್ತು ಪ್ರಾಥಮಿಕ ಶಿಕ್ಷಣದ ಪೂರ್ಣಗೊಳಿಸುವಿಕೆ ಕಾಯ್ದೆಯ ಪ್ರಕರಣ 29 ರ ಪ್ರಕಾರ ಶೈಕ್ಷಣಿಕ ಪ್ರಾಧಿಕಾರ.**

20(1) ಕಾಯಿದೆ 29 ರ ಪ್ರಕಾರ ರಾಜ್ಯ ಶೈಕ್ಷಣಿಕ ಸಂಶೋಧನೆ ಮತ್ತು ಸಂಶೋಧನೆ ಇಲಾಖೆಯನ್ನು Directorate of State Education and Training = DSERT) ಶೈಕ್ಷಣಿಕ ಪ್ರಾಧಿಕಾರವೆಂದು ಕಾಯ್ದೆ 29 ರ ಪ್ರಕಾರ ನಿಗದಿಗೊಳಿಸಲಾಗಿದೆ.

(2) DSERT ಯು ಈ ಕೆಳಗಿನ ಜವಾಬ್ದಾರಿಗಳಿಗೆ ಬದ್ಧವಾಗಿದೆ :

(ಎ) ರಾಷ್ಟ್ರ ಮತ್ತು ರಾಜ್ಯ ಪಠ್ಯ ಕ್ರಮ ಚೌಕಟ್ಟುಗಳಿಗೆ ಅನುಗುಣವಾಗಿ ಪಠ್ಯಕ್ರಮವನ್ನು ರಚಿಸತಕ್ಕದ್ದು.

(ಬಿ) ತರಗತಿವಾರು ಮತ್ತು ವಯೋಮಾನವಾರು ಪಠ್ಯ ವಸ್ತುವನ್ನು ತಯಾರಿಸುವುದು.

(ಸಿ) ತರಗತಿಯ ಅಂತ್ಯಕ್ಕೆ ವಿಷಯವಾರು ನಿರೀಕ್ಷಿತ ಕಲಿಕೆಯ ಫಲಗಳನ್ನು ಗುರುತಿಸುವುದು ಹಾಗೂ ವ್ಯಾಖ್ಯಾನಿಸುವುದು. ಹಾಗೂ ಇವುಗಳನ್ನು ಆಧರಿಸಿ ಪಠ್ಯ ಪುಸ್ತಕ ಮತ್ತು ಕಲಿಕಾ ಸಾಮಗ್ರಿಯನ್ನು ಹೊರತರತಕ್ಕದ್ದು.

(ಡಿ) ಆವರ್ತ ಕಾಲದಲ್ಲಿ ಪ್ರಾಥಮಿಕ ಶಿಕ್ಷಕ ಸೇವಾ ಪೂರ್ವ ತರಬೇತಿಯ ಪೂರ್ವ ಸೇವಾ ತರಬೇತಿಯ ಪಠ್ಯಕ್ರಮವನ್ನು ನವೀಕರಿಸುವುದು.

(ಇ) ಯುಕ್ತವಾದ ಸೇವಾ ನಿರತ ತರಬೇತಿ ಕಾರ್ಯಕ್ರಮದ ವಿನ್ಯಾಸವನ್ನು ರಚಿಸುವುದು.

(ಎಫ್) ಒಂದರಿಂದ ಎಂಟನೇ ಇಯತ್ತೆಯವರೆಗೆ – ನಿರಂತರ ಮತ್ತು ಸಮಗ್ರ

(3) ಸೂಕ್ತವಾದ ಮೌಲ್ಯಮಾಪನ ಸಾಧನಗಳನ್ನು ಬಳಸಿ – ಸರ್ಕಾರಿ, ಅನುದಾನಿತ, ಅನುದಾನ ರಹಿತ ಪ್ರಾಥಮಿಕ ಶಾಲೆಗಳಲ್ಲಿನ ಕಲಿಕೆಯ ಮಟ್ಟವನ್ನು ಮಾದರಿ ಸಮೀಕ್ಷೆಯ ಮೂಲಕ ತಿಳಿದು ಪ್ರಾಥಮಿಕ ಶಿಕ್ಷಣದ ಗುಣಮಟ್ಟ ವಸ್ತು ಸ್ಥಿತಿಯನ್ನು ರಾಜ್ಯ 1 ಜಿಲ್ಲೆ, 1 ಬ್ಲಾಕ್ ಹಂತಕ್ಕೆ ಅನ್ವಯಿಸಿದಂತೆ ವಾರ್ಷಿಕ ವರದಿಯನ್ನು ಹೊರತರಲು ಒಂದು ಪ್ರಾಧಿಕಾರವನ್ನು ಪದನಾಮಿಕರಿಸತಕ್ಕದ್ದು.

(4) ಪಠ್ಯ ಕ್ರಮ ಮತ್ತು ಪಠ್ಯ ಪುಸ್ತಕಗಳಲ್ಲಿ, ನಿಗದಿಗೊಳಿಸಲಾಗಿರುವ ಸ್ಥೂಲ ಮಾರ್ಗದರ್ಶಿ ಸೂತ್ರಗಳ ಹಿನ್ನೆಲೆಯಲ್ಲಿ ಶಾಲೆಗಳ ಸ್ಥಳೀಯ ಸನ್ನಿವೇಶ ಮತ್ತು ತರಗತಿಗಳಿಗೆ ಅನುಗುಣವಾಗಿ ಸ್ವಲ್ಪ ಮಟ್ಟಿನ ಶೈಕ್ಷಣಿಕ ಸ್ವಾತಂತ್ರ್ಯವನ್ನು ಬೋಧನಾ ವಿಧಾನಗಳ ಹೊಂದಾಣಿಕೆ ಮಾಡಿಕೊಳ್ಳುವಲ್ಲಿ ನೀಡುವುದರಿಂದ ಶೈಕ್ಷಣಿಕ ಗುಣಮಟ್ಟದಲ್ಲಿ ಉತ್ಕೃಷ್ಟತೆಯನ್ನು ಸಾಧಿಸಲು ಸಾಧ್ಯವಾಗುತ್ತೆ. ಇದು ಪ್ರಯೋಗಶೀಲತೆ ಮತ್ತು ನಾವೀನ್ಯತೆಯನ್ನು ಬೋಧನಾ ಶಾಸ್ತ್ರದಲ್ಲಿ ತರಲು ಸಾಧ್ಯವಾಗುತ್ತದೆ.

**ಪ್ರಕರಣ ೩೦ ರ ಪ್ರಕಾರ ಪ್ರಮಾಣ ಪತ್ರ ನೀಡಿಕೆ** :

21(1) ಎಂಟು ವರ್ಷ ಪ್ರಾಥಮಿಕ ಶಿಕ್ಷಣವನ್ನು ಪೂರೈಸಿದ ಮಗುವಿಗೆ ಶಾಲೆಯು ಪ್ರಾಥಮಿಕ ಶಿಕ್ಷಣ ಪೂರ್ಣಗೊಳಿಸಿದ ಕುರಿತು ಪ್ರಮಾಣ ಪತ್ರವನ್ನು ಶೈಕ್ಷಣಿಕ ವರ್ಷದ ಕೊನೆಯ ಕೆಲಸದ ದಿನ ಕೊಡುವುದು.

(2) ಈ ಪ್ರಮಾಣ ಪತ್ರವು ಮಗುವಿನ ಶೈಕ್ಷಣಿಕ ಪ್ರಗತಿಯನ್ನು ಒಳಗೊಂಡಿರಬೇಕು. ಈ ಪ್ರಗತಿಯು ಪಠ್ಯ ಮತ್ತು ಸಹ ಪಠ್ಯ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಇರತಕ್ಕದ್ದು. DSERT ಯು ಒಂದು ಮಾದರಿ ನಮೂನೆಯನ್ನು ತಯಾರಿಸಿ ಎಲ್ಲಾ ಶಾಲೆಗಳಿಗೆ ಕಳುಹಿಸತಕ್ಕದ್ದು.

(3) ಈ ಪ್ರಮಾಣ ಪತ್ರವನ್ನು ನೀಡುವಾಗ ವಿದ್ಯಾರ್ಥಿಯ ನಿರೀಕ್ಷಿತ ಕಲಿಕಾ ಮಟ್ಟವನ್ನು ಸಾಧಿಸಿರುತ್ತಾನೆ/ಳೆ ಎಂದು ಖಾತ್ರಿಪಡಿಸುವುದು. ಕ್ರಮ ಮಾಡುವುದು. ಈ ಹಂತದಲ್ಲಿ

BEO/DDPI ರವರು ಅಪರೂಧಿಗಳನ್ನು [mal-practives] ಗಂಭೀರವಾಗಿ ಪರಿಗಣಿಸಿ ಸರ್ಕಾರಿ ಸೇವಾ ನಿಯಮಗಳ ಪ್ರಕಾರ ಶಿಸ್ತು ಪ್ರಕ್ರಿಯೆಯನ್ನು ಚಾಲನೆಗೊಳಿಸತಕ್ಕದ್ದು.

**ಭಾಗ 8 ಮಗುವಿನ ಹಕ್ಕಿನ ರಕ್ಷಣೆ ಕಾಯಿದೆ ಪ್ರಕರಣ 31 ರ ಪ್ರಕಾರ ರಾಜ್ಯ ಮಕ್ಕಳ ಹಕ್ಕು ರಕ್ಷಣಾ ಆಯೋಗದ ಕಾರ್ಯಗಳು :**

22. (1) ರಾಜ್ಯವು ಕರ್ನಾಟಕ ರಾಜ್ಯ ಮಕ್ಕಳ ಹಕ್ಕು ರಕ್ಷಣಾ ಆಯೋಗವನ್ನು ಆವರ್ತಕಾಲಕ್ಕೆ ರಚಿಸತಕ್ಕದ್ದು.

(2) ಆಯೋಗವು ಅನ್ಯಕ್ಷರನ್ನೊಳಗೊಂಡಂತೆ ಮೂರು ಸದಸ್ಯರನ್ನು ಹೊಂದಿದ್ದು- ಅಧ್ಯಕ್ಷರು ಖ್ಯಾತ ಶಿಕ್ಷಣತಜ್ಞರು ಅಥವ ಹೈಕೋರ್ಟ್ ನ್ಯಾಯಾದೀಶರು ಅಥವ ಮಕ್ಕಳ ಹಕ್ಕುಗಳನ್ನು ಪ್ರೋತ್ಸಾಹಿಸುವಲ್ಲಿ ಮೇರು ಕಾರ್ಯವನ್ನು ಮಾಡಿದವರಾಗಿರುತ್ತಾರೆ.
(3) ಉಳಿದಿಬ್ಬರು ಸದಸ್ಯರು ಪ್ರಾಥಮಿಕ ಶಿಕ್ಷಣ, ಮಗುವಿನ ಆರೋಗ್ಯ ಮತ್ತು ಮಕ್ಕಳ ಅಭಿವೃದ್ಧಿ, ಬಾಲ ನ್ಯಾಯ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸಿದವರಾಗಿದ್ದು ದಕ್ಷರೂ, ಅವಿಚ್ಛನ್ನ ವ್ಯಕ್ತಿಗಳೂ ಆಗಿರುತ್ತಾರೆ.
(4) ಮೂರು ಮಂದಿಯಲ್ಲಿ ಕನಿಷ್ಠ ಒಬ್ಬರಾದರೂ ಮಹಿಳೆಯರಾಗಿರತಕ್ಕದ್ದು.

**ಕಾಯ್ದೆಯ ಪ್ರಕರಣ 32ರ ಪ್ರಕಾರ ರಾಜ್ಯ ಆಯೋಗದ ಮುಂದೆ ದೂರುಗಳನ್ನು ಸಲ್ಲಿಸುವ ಕ್ರಮ:**

23. 1. ಪ್ರತೀ ಬ್ಲಾಕಿನಲ್ಲಿ ರಾಜ್ಯ ಆಯೋಗವು ಮಕ್ಕಳ ಸಹಾಯವಾಣಿಯನ್ನು ಸಾಧಿಸತಕ್ಕದ್ದು, ಈ ಸಹಾಯವಾಣಿಯನ್ನು ಎಸ್.ಎಂ.ಎಸ್, ಪತ್ರ, ಟೆಲಿಫೋನ್, ಇಂಟರ್‌ನೆಟ್, ಹೆಲ್ಪ್ ಡೆಸ್ಕ್ ಮೂಲಕ ಸಂಪರ್ಕಿಸಲು ಸಾಧ್ಯವಾಗಬೇಕು. ತೊಂದರೆಗೊಳಪಟ್ಟ ಮಗು/ತಂದೆ ತಾಯಿ/ ಪೋಷಕ/ ವ್ಯಕ್ತಿಗೆ ಮಗುವಿನ ಹಕ್ಕು ಉಲ್ಲಂಘನೆ ಕುರಿತು ಸುಲಭವಾಗಿ ಸಂಪರ್ಕಿಸಲು ಸಾಧ್ಯವಾಗುವ ಮತ್ತು ದೂರುಗಳನ್ನು ದಾಖಲಿಸಿಕೊಳ್ಳುವ ಆದರೆ ದೂರು ನೀಡಿದವರ ಹೆಸರನ್ನು ಬಹಿರಂಗಗೊಳಿಸದ ವೇದಿಕೆ ಇದಾಗಬೇಕು.

2. ಸಹಾಯವಾಣಿಗೆ ದಾಖಲಾದ ಎಲ್ಲಾ ದೂರುಗಳನ್ನು ಪಾರದರ್ಶಕವಾಗಿ ಮತ್ತು ಶೀಘ್ರವಾಗಿ ಇತ್ಯರ್ಥ ಪಡಿಸಲು ಉಸ್ತುವಾರಿ ವ್ಯವಸ್ಥೆಯನ್ನು ರಾಜ್ಯ ಆಯೋಗವು ಜಾರಿಗೆ ತರತಕ್ಕದ್ದು.

3. ಪ್ರಕರಣ 25(2) ರಲ್ಲಿ ನಿಗದಿ ಪಡಿಸಿರುವಂತೆ ದೂರುಗಳ ವಿಚಾರಣೆ, ನಿವಾರಣೆಯ ಕ್ರಮಗಳು ಇರತ್ತಕ್ಕದ್ದು.

**ಪ್ರಕರಣ 34 ರ ಅನುಸಾರ ರಾಜ್ಯ ಸಲಹಾ ಮಂಡಳಿಯ ಸಂರಚನೆ ಮತ್ತು ಪ್ರಕಾರ್ಯಗಳು.**

24 (1) ಪ್ರಾಥಮಿಕ ಶಿಕ್ಷಣದ ಕರ್ನಾಟಕ ರಾಜ್ಯ ಸಲಹಾ ಮಂಡಳಿಯ ಒಬ್ಬ ಅಧ್ಯಕ್ಷರು ಮತ್ತು 14 ಮಂದಿ ಸದಸ್ಯರನ್ನು ಒಳಗೊಂಡಿರುತ್ತದೆ.

2. ಕರ್ನಾಟಕ ಸರ್ಕಾರದ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಪದನಿಮಿತ್ತ ಅಧ್ಯಕ್ಷರು ಮತ್ತು ಕರ್ನಾಟಕ ಸರ್ಕಾರದ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಕಾರ್ಯದರ್ಶಿಯವರು ಉಪಾಧ್ಯಕ್ಷರಾಗಿ ಈ ಸಮಿತಿಯಲ್ಲಿರುತ್ತಾರೆ.

3, ಪ್ರಾಥಮಿಕ ಶಿಕ್ಷಣ ಕ್ಷೇತ್ರದಲ್ಲಿ ಮೇರು ಕಾರ್ಯವನ್ನು ಮಾಡಿದ ವ್ಯಕ್ತಿಗಳನ್ನು ಸರ್ಕಾರವು ಈ ಮಂಡಳಿಯ ಸದಸ್ಯರನ್ನಾಗಿ ನೇಮಿಸುತ್ತದೆ. ಈ ಮಂಡಳಿಯಲ್ಲಿ

(ಎ) 04 ಮಂದಿ ಎಸ್.ಸಿ/ಎಸ್.ಟಿ ಮತ್ತು ಅಲ್ಪಸಂಖ್ಯಾತ ವರ್ಗಕ್ಕೆ ಸೇರಿದ ಸದಸ್ಯರಿರಬೇಕು.
(ಬಿ) ಒಬ್ಬರು ವಿಶೇಷ ಅಗತ್ಯವುಳ್ಳ ಮಕ್ಕಳ ಕುರಿತು ವಿಶೇಷ ಜ್ಞಾನ ಮತ್ತು ಪ್ರಾಯೋಗಿಕ ಅನುಭವವುಳ್ಳವರು ಇರತಕ್ಕದ್ದು.
(ಸಿ) ಪೂರ್ವ ಪ್ರಾಥಮಿಕ ಶಿಕ್ಷಣ ಕ್ಷೇತ್ರದಲ್ಲಿ ದುಡಿದವರು ಒಬ್ಬರು ಇರತಕ್ಕದ್ದು.
(ಡಿ) ಪ್ರಾಥಮಿಕ ಶಿಕ್ಷಕ ಶಿಕ್ಷಣ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸಿದ ಇಬ್ಬರು
(ಇ) ಉಳಿದ ಸದಸ್ಯರು ಪ್ರಾಥಮಿಕ ಶಿಕ್ಷಣ, ಮಕ್ಕಳ ಮನೋವಿಜ್ಞಾನ ಮತ್ತು ಮಕ್ಕಳ ಅಭಿವೃದ್ದಿ , ಸಮಾಜ ಕಲ್ಯಾಣ ಮತ್ತು ಬಾಲ ಕಾರ್ಮಿಕ ವಲಯದಲ್ಲಿ ಕಾರ್ಯನಿರ್ವಹಿಸಿದವರಾಗಿರಬೇಕು
(ಎಫ್) 14 ಮಂದಿಯಲ್ಲಿ ಪ್ರತಿಶತ 50 ಭಾಗ ಮಹಿಳೆಯಾಗಿರತಕ್ಕದ್ದು.
(ಜಿ) ಸಾರ್ವಜನಿಕ ಶಿಕ್ಷಣ ಇಲಾಖೆ ಆಯುಕ್ತರು, ಅಪರಾ ಆಯುಕ್ತರು, ರಾಜ್ಯ ಯೋಜನಾ ನಿರ್ದೇಶಕರು ಕರ್ನಾಟಕ ಸರ್ವ ಶಿಕ್ಷಣ ಅಭಿಯಾನ, ನಿರ್ದೇಶಕರು ಪ್ರಾಥಮಿಕ ಶಿಕ್ಷಣ ಉರ್ದು ಮತ್ತಿತರ ಅಲ್ಪಸಂಖ್ಯಾತ ಭಾಷೆಗಳ ನಿರ್ದೇಶಕರುಗಕರು ಮತ್ತು ಡಿ.ಎಸ್.ಇ.ಆರ್.ಟಿ ನಿರ್ದೇಶಕರು ಪದ ನಿಮಿತ್ತ ಸದಸ್ಯರಾಗಿರುತ್ತಾರೆ
(ಹೆಚ್) ಸಾ,ಶಿ,ಇ, ಆಯುಕ್ತರು ಮಂಡಳಿಯ ಸದಸ್ಯ ಕಾರ್ಯದರ್ಶಿಯಾಗಿರುತ್ತಾರೆ.
(ಐ) ಕನಿಷ್ಠ ಪ್ರತಿ ತ್ರೈಮಾಸಿಕಕ್ಕೆ ಒಮ್ಮೆ ಸಭೆ ಸೇರಿ ಈ ಕಾಯ್ದೆ ಮತ್ತು ನಿಯಮಗಳು ರಾಜ್ಯದಲ್ಲಿ ಅನುಷ್ಠಾನಗೊಳ್ಳುತ್ತಿರುವ ಕುರಿತು ಅವಲೋಕನ ನಡೆಸುವುದು.
(ಜೆ) ಈ ಮಂಡಳಿಯ ಸಭೆಯ ಅಧ್ಯಕ್ಷತೆಯನ್ನು ಮಂಡಳಿಯ ಅಧ್ಯಕ್ಷರು ಮತ್ತು ಅವರ ಗೈರುಹಾಜರಿಯಲ್ಲಿ ಉಪಾಧ್ಯಕ್ಷರು ವಹಿಸತಕ್ಕದ್ದು. ಪ್ರತಿಶತ 50 ಭಾಗ ಸದಸ್ಯರು ಮಂಡಳಿಯ ಸಭೆಯಲ್ಲಿ ಹಾಜರಿರುವುದನ್ನು ಕೋರಂ ಎಂದು ಪರಿಗಣಿಸಲಾಗುವುದು.
(ಕೆ) ಪ್ರತಿ ಮೂರು ವರ್ಷಕ್ಕೊಮ್ಮೆ ಈ ಮಂಡಳಿಯನ್ನು ಪುನರ್ರಚಿಸತಕ್ಕದ್ದು ಮತ್ತು ಯಾವುದೆ ಸದಸ್ಯರು 2 ಅವಧಿಗಿಂತ ಹೆಚ್ಚು ಅವಧಿಗೆ ಸದಸ್ಯರಾಗಿ ಮುಂದುವರೆಯತಕ್ಕದಲ್ಲ.
(ಎಲ್) ಈ ಮಂಡಳಿಯ ಸದಸ್ಯರ ಹಾಜರಿ ಭತ್ಯೆ / ದಿನ ಭತ್ಯೆ/ ಪ್ರಯಣ ಭತ್ಯೆಯನ್ನು ರಾಜ್ಯ ಸರ್ಕಾರವು ನಿಗಧಿಗೊಳಿಸತಕ್ಕದ್ದು.

**ಕಾಯ್ದೆಯ ನಿಯಮಗಳ ಉಲಂಘನೆಯಾದಲ್ಲಿ ಕ್ರಮಗಳ ಜಾರಿಗೆ ನಿಗದಿತ ಪ್ರಾಧಿಕಾರ ಹಾಗೂ ವಿಧಿ ವಿಧಾನಗಳು.**

25. (1) ಪ್ರಕರಣ 13,18,19,25,26,27ರ ಉಲ್ಲಂಘನೆಗಾಗಿ ದಂಡ ವಿಧಿಸುವ ಪ್ರಾಧಿಕಾರಿಯು ಆಯಾ ಜಿಲ್ಲೆಯ ಜಿಲ್ಲಾ ಪಂಚಾಯಿತಿಯ ಮುಖ್ಯಕಾರ್ಯನಿರ್ವಹಣಾಧಿಕಾರಿಗಳಾಗಿರುತ್ತರೆ. ಆಯಾ ಬ್ಲಾಕಿನ ಬಿ.ಇ.ಓ ಮತ್ತು ಆಯಾ ಜಿಲ್ಲೆಯ ಡಿ.ಡಿ.ಪಿ.ಐ ರವರು ಕಾಯ್ದೆ 1 ನಿಯಮಗಳ ಉಲ್ಲಂಘನೆಯಾದ ಪ್ರಕರಣಗಳನ್ನು ಸೂಕ್ತ ವಿಚಾರಣೆಯ ನಂತರ ಸಿ.ಇ,ಓ ಗಮನಕ್ಕೆ ತರುವುದು

(2) ಪ್ರಥಮ ಹಂತದಲ್ಲಿ ಉಲಂಘನೆಯ ಪ್ರಕರಣಗಳನ್ನು ಗಮನಿಸಿದ ತರುವಾಯ ಅಥವಾ ಕಾಯ್ದೆ 1 ನಿಯಮ ಉಲ್ಲಂಘನೆ ಕುರಿತು ಯಾವ ವ್ಯಕ್ತಿಯ ಮೇಲಾದರು ದೂರು ಬಂದ ಬಳಿಕ ಒಂದು ನೋಟಿಸನ್ನು ಸಂಬಂದಿಸಿದ ಶಾಲೆ/ಶಾಲಾ ಆಡಳಿತ ಮಂಡಳಿ/ ಎಸ್.ಡಿ.ಎಂ.ಸಿ ನೌಕರರಿಗೆ ನೀಡಿ ಅವರಿಂದ ವಿವರಣೆಯನ್ನು 15 ದಿನಗಳೊಳಗೆ ನೀಡುವಂತೆ ಕೇಳುವುದು. ಒಂದುವೇಳೆ ನೀಡಿದ ಉತ್ತರ ಸಮಧಾನಕರವಲ್ಲದಿದರೆ ಅಥವಾ ಆರೋಪಿತ ಶಾಲೆ/ಶಾಲಾ ಆಡಳಿತ ಮಂಡಳಿ/ ಎಸ್.ಡಿ.ಎಂ.ಸಿ ನೌಕರರು ಪ್ರತಿಕ್ರಯೆ ನೀಡಲು ವಿಫಲರಾದರೆ ಅಂತಹ ಪ್ರಕಣಗಳನ್ನು ಡಿ.ಡಿ.ಪಿ.ಐ ಮತ್ತು ಜಿಲ್ಲಾ ಪಂಚಾಯಿತಿಯ ಸಿ.ಇ.ಓ ಗಮನಕ್ಕೆ ತರುವುದು.

(3) ಡಿ.ಡಿ.ಪಿ.ಐ ರವರು ಅಂತಹ ಸಂಸ್ಥೆಗಳಿಗೆ ಭೇಟಿ ನೀಡಿ ನಿಯಮಗಳ ಉಲ್ಲಂಘನೆ ಕುರಿತು ವಿಚಾರಣೆ ನಡೆಸಿ ಸಿ.ಇ.ಓ ರಿಗೆ ವರದಿ ನೀಡುವುದು. ಜಿಲ್ಲಾ ಪಂಚಾಯಿತಿಯ ಎರಡನೇ ನೋಟೀಸನ್ನು ನೀಡತಕ್ಕದ್ದು.

(4) ನೀಡಿದ ಉತ್ತರವು ಸಮಾಧಾನಕರವಲ್ಲದಿದ್ದರೆ ಅಥವ ಸಂಬಂಧಿಸಿದ ಅಥವ ಸಂಬಂಧಿಸಿದ ಉಲ್ಲಂಘನೆದಾರರು ಪ್ರತಿಕ್ರಿಯೆ ನೀಡದಿದ್ದರೆ ಕಾಯ್ದೆಯಲ್ಲಿ ಉಲ್ಲೇಖಿಸಿರುವಂತೆ ದಂಡವನ್ನು ವಿಧಿಸತಕ್ಕದ್ದು.

(5) ಒಂದು ತಿಂಗಳಿಗಿಂತ ಅಧಿಕವಾಗಿ ಯಾವುದೇ ಹಂತದಲ್ಲಿ ಕ್ರಮ ಜರುಗಿಸುವುದು ಅಥವ ಕ್ರಮ ಜರುಗಿಸುವಲ್ಲಿ ಸೋಲುವ ಅಥವ ದಂಡವನ್ನು ವಿಧಿಸುವಲ್ಲಿ ಆಗುವ ಆ ಕಾರಣವಾದ ವಿಳಂಬವನ್ನು ಈ ಕಾಯ್ದೆಯ ಉಲ್ಲಂಘನೆ ಎಂದು ಪರಿಭಾವಿಸಲಾಗುತ್ತದೆ. ಹಾಗೂ ಸಂಬಂಧಿಸಿದ ಪ್ರಾಧಿಕಾರಗಳನ್ನು ಎಸಗಿರುವ ಪ್ರಮಾದಕ್ಕೆ ಉತ್ತರದಾಯಿಗಳನ್ನಾಗಿ ಮಾಡಲಾಗುತ್ತದೆ. ಅಂತಹ ಸಂದರ್ಭದಲ್ಲಿ ನಿಕಟ ಮೇಲಾಧಿಕಾರಿಯು ಶಿಸ್ತು ಕ್ರಮಗಳನ್ನು ಸಂಬಂಧಿಸಿದ ನೌಕರನ ಮೇಲೆ ಪ್ರಾರಂಭಿಸತಕ್ಕದ್ದು.

(6) ಡಿ.ಡಿ.ಪಿ.ಇ ಮತ್ತು ಬಿ.ಇ.ಒ ಗಳು ಕಾಯಿದೆಯ ಪ್ರಕರಣ 14,15,16,17,24,28,30,32 ರ ಉಲ್ಲಂಘನೆಗಾಗಿ ಕ್ರಮ ಜರುಗಿಸುವ ಸಕ್ಷಮ ಪ್ರಾಧಿಕಾರಿಗಳಾಗಿರುತ್ತಾರೆ.

(7) ಈ ನಿಯಮಗಳ ಅನ್ವಯ ಯಾವುದೇ ವ್ಯಕ್ತಿಯು ತಾನು ಪ್ರಾಧಿಕಾರದ ನಿರ್ಣಯದಿಂದ ತೊಂದರೆಗೊಳಪಟ್ಟಿದ್ದಲ್ಲಿ ರಾಜ್ಯ ಮಕ್ಕಳ ಹಕ್ಕುಗಳ ಮೇಲ್ಮನವಿ ಸಲ್ಲಿಸಬಹುದು.